ಕೊರವಂಜಿ



3ನೆ

Koravan

ಡಿಸೆಂಬರ

೧೯೫೭

★

ಸಂಪಾದಕರು :

ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ಲೆಕ್ಚರ
ಶ್ರೀ|| ವರದಿಗಾರ
ಶ್ರೀ|| ಕಾಮತ್
ಶ್ರೀ|| ಕೇಫ
ಶ್ರೀ|| ರಾಮಿ
ಶ್ರೀ|| ಪಾಟೀಲ
ಶ್ರೀ|| ಅ. ರಾ. ಸೇ.
ಡಾ|| ಪಾಪಣ್ಣ
ಶ್ರೀ||| ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.


For 3 way Beauty Treatment....
RAJA
SNOW
RAJA
AMLA
RAJA
RAJA
SNOW
AMLA HAIR OIL, KASTURI SOAP
MANYAM & CO BANGALORE MADRAS MADURAI BOMBAY
FAS


ಈ ತಿಂಗಳಲ್ಲಿಯೇ
ಪ್ರದರ್ಶನ!
ನಿಮ್ಮ ನೆಚ್ಚಿನ
ಚಿತ್ರಮಂದಿರದಲ್ಲಿ
ನೋಡಲು ಮರೆಯದಿರಿ
ಮಾಯಾಬಜಾರ್
ನಿರ್ದೇಶನ
ಕೆ. ವಿ. ರೆಡ್ಡಿ
ನಿರ್ಮಾಪಕರು ನಾಗಿರೆಡ್ಡಿ ಚಕ್ರಪಾಣಿ
ವಿಜಯ ಟಾಕೀ ಡಿಸ್ಟ್ರಿಬ್ಯೂಟರ್ಸ್
ಬೆಂಗಳೂರು ೨.
ಹಂಚಿಕೆಗಾರರು
ಶ್ರೀನಿವಾಸ ಪಿಕ್ಚರ್ಸ್
ಗದಗ.

ಕಟಕ

ಕೊರವಂಜಿ

ಸಂಪುಟ ೧೭ | ಡಿಸೆಂಬರ್ ೧೯೫೭ | ಸಂಚಿಕೆ ೯

ಕುಹಕಿಡಿಗಳು

ರಷ್ಯನ್ ಅಮೇರಿಕನ್ನರ ಮರಿಚಂದ್ರನ ಪ್ರಯತ್ನಗಳಲ್ಲಿ ಒಂದೇ ವ್ಯತ್ಯಾಸ!

ರಷ್ಯನ್ ಚಂದ್ರಮರಿ ಇಳಿಯೋದಿಲ್ಲ—

ಅಮೇರಿಕನ್ ಚಂದ್ರಮರಿ ಏರೋದಿಲ್ಲ!

* * *

ಅರಗಿನ ವಸ್ತುಗಳ ಅಖಿಲ ಭಾರತ ಪ್ರದರ್ಶನ.

—ಅರಗಿನ ಮನೆಗೆ ಪಾಂಡವರ ಕಾಲದಿಂದಲೂ ಭಾರತವು ಪ್ರಸಿದ್ಧಿಯಲ್ಲವೇ?

* * *

ಮೈಸೂರಿನಲ್ಲಿ ಭೂದಾನಕ್ಕೆ ಸಾಕಷ್ಟು ಸಹಾಯ ದೊರಕಲಿಲ್ಲವೆಂದು ವಿನೋಬಾಜೀಯವರು ಅಂದರಂತೆ—

—ಮೈಸೂರಿನಲ್ಲಿರುವ ಭೂಮಿಯೆಲ್ಲಾ ಕಾಂಗ್ರೆಸ್ ಮುಂದಾಳುಗಳದೇ ಅನ್ನುವ ಅಂಶ ಅವರಿಗೆ ಪಾಪ! ತಿಳಿದಿರಲಿಕ್ಕಿಲ್ಲ.

* * *

ಪಾಕಿಸ್ತಾನದಲ್ಲಿ ಮಂತ್ರಿಮಂಡಳದ ಪತನ ಖಂಡಿತ. (ಸುದ್ದಿ)

—ಈ ಸುದ್ದಿಯ ಅಚ್ಚು ಕಟ್ಟವನ್ನು ಪತ್ರಿಕೆಗಳವರು ಬಿಚ್ಚುವುದೇ ಇಲ್ಲವೇನೋ?

* * *

ಎರಡನೇ ಸ್ಪೂಟ್ನಿಕ್ಕಿನಿಂದಾಗಿ ಅತ್ತ ಲೈಕಾ ಅಮರವಾಯಿತು. ಇತ್ತ ಏಕ್‌ಗೆ ಲಕ್ವಾ ಹೊಡೆಯಿತು ಎನ್ನುವುದು ಕುಹಕ.

* * *

ಹುಡುಗತನದಲ್ಲಿ ಮರಕೋತಿ ಆಡಿ ಅಭ್ಯಾಸವಿದ್ದ ಪ್ರಯುಕ್ತ ಈಗ ಬಸ್ಸಿನಲ್ಲಿ ನಿಂತು ಪ್ರಯಾಣಮಾಡಲು ಸುಲಭವಾಗಿದೆ ಎಂದೊಬ್ಬರು ಪತ್ರ ಬರೆದು ಮರಕೋತಿ ಆಟಕ್ಕೆ ಭಾರತೀಯ ಆಟಗಳಲ್ಲಿ ಪ್ರಾಮುಖ್ಯತೆ ಕೊಡಬೇಕೆಂದು ಸಲಹೆ ನೀಡಿದ್ದಾರೆ.

* * *

ಶ್ರೀ ಟಿ.ಟಿ.ಕೆ.ಯವರು ಅಮೇರಿಕಾದಲ್ಲಿ ಆಡಿದ ಮಾತುಗಳನ್ನು ಪಂಡಿತಜೀ ಯವರು ಇಲ್ಲಿ ಈಗ ಸರಿಮಾಡಲೆತ್ನಿಸುವ ಗಲಾಟೆಯಲ್ಲಿ ಎರಡನೇ ಪಾಂಚವಾರ್ಷಿಕ ಯೋಜನೆಗೆ ೨ ತಿಂಗಳು ರಜೆ ಸಿಕ್ಕಿದಂತಾಯ್ತು!!

* * *

ಗುಬ್ಬಾಲೆಯವರು, ತಮ್ಮೂರಿನ ಸರ್ಕಾರಿ ಔಷಧಾಲಯದಲ್ಲಿ ಔಷಧಿ ತೆಗೆದು ಕೊಂಡು ಬಂದು, ಹೆಬ್ಬಿಯಲ್ಲಿ ಔಷಧಿ ಅಂಗಡಿ ಇಟ್ಟು ಮಾರುತ್ತಿರುವರೆಂದೂ, ಹೆಬ್ಬಿಯವರು ಅದೇ ರೀತಿ ಗುಬ್ಬಾಲೆಯಲ್ಲಿ ಕಾರ್ಯಾಚರಣೆ ಇಟ್ಟುಕೊಂಡಿರುವ ರೆಂದೂ, ಗಾಳಿವರ್ತಮಾನ ಬಂದಿದೆ.

* * *

ಕೆಲವು ದಿನಗಳ ಹಿಂದೆ ತಾವು ಹಾರಿಸಿದ ರಾಕೆಟ್‌ನಿಂದಾಗಿ ಹಲವು ಗೋಲಿ ಗಳು ಸೂರ್ಯಮಂಡಲವನ್ನು ಸೇರಿರಬಹುದೆಂದು ಅಮೇರಿಕನ್ನರು ಊಹಿಸಿದ್ದಾರಂತೆ.

—ಕವಿಗಳು ಕಂಡುದನ್ನು ಈಗ ರವಿಯೂ ಕಂಡಂತಾಯಿತು.

* * *

ಕೇರಳದಲ್ಲಿ ಶೇಕಡಾ ೯೬ ಜನರಿಗೆ ಓದು ಬರಹ ಬರುತ್ತದಂತೆ.

—ಮಿಕ್ಕ ೪ ಜನರು ಬರೀ ರಷ್ಯಾ ಭಾಷೆಯನ್ನು ಕಲಿತಿದ್ದಾರೆಂಬುದು ನಿಜವಲ್ಲ ವಂತೆ!

* * *

ತಿರುಚಿರಪಳ್ಳಿಯಲ್ಲಿ ಪ್ರಾತಃ ಸ್ನಾನಕ್ಕೆ ನದಿಗೆ ಹೋದ ಬ್ರಾಹ್ಮಣರನ್ನು ಹಿಡಿದು. ಜುಟ್ಟು ಬೋಳಿಸಿ, ಜನಿವಾರ ಹರಿದು, ಅಪಘಾತ ಮಾಡಿದವರು ಓಡಿ ಹೋದರಂತೆ.

—ಚರಿತ್ರೆ, ಮಲೇರಿಯಾದಂತೆ ಮರಕಳಿಸುತ್ತದೆ ಎನ್ನುವುದಕ್ಕೆ ನಿದರ್ಶನ ಇದು. ಹಿಂದೆ ಋಷಿ, ಯಜ್ಞ, ರಾಕ್ಷಸ, ವಿಧ್ವಂಸಕ ಕೃತ್ಯ ಎಂದೆಲ್ಲಾ ಕೇಳಿದ್ದಿ ಲ್ಲವೇ?

——:O:——

ಉರಿಗಾಳು

ಫ್ಲೂ ವ್ಯಾಧಿಯ ಎರಡನೆ ಹೊಡೆತ ಇನ್ನೂ ನಮ್ಮೂರಿಗೆ ಬಂದಿಲ್ಲವಂತೆ.

—ಆದರ ಬದಲು ಅಖಿಲ ಭಾರತದ ಡಾಕ್ಟರುಗಳೆಲ್ಲರೂ ಸಮ್ಮೇಳನ ಸೇರುತ್ತಾರಂತೆ.

* * *

ಹೊಟ್ಟೆಹುಣ್ಣಿನಿಂದ ನರಳುವವರಲ್ಲಿ ಹೆಂಗಸರಿಗಿಂತ ಗಂಡಸರೇ ಜಾಸ್ತಿ (ವರದಿ)

—ಹೊಟ್ಟೆ ಹುಣ್ಣು ಬಂದ ಗಂಡಸರ ಕೈಹಿಡಿದ ಹೆಂಗಸರೂ ನರಳುತ್ತಾರೆ ಅನ್ನುವ ವಿಷಯ ಮರೆತಿರಬಹುದು, ವರದಿಗಾರರು.

* * *

ಕರುಣಾಗಂ ಇ.ವಿ.ಆರ್.ರವರು, ಗಾಂಧೀಜೀಯವರ ಪ್ರತಿಮೆಗಳನ್ನು ಬೇಧಿಸುವ ಚಳುವಳಿ ಹೂಡಲಿದ್ದಾರಂತೆ—

—ಆದರೆ ಅದೇ ಸ್ಥಾನದಲ್ಲಿ ತಮ್ಮ ಪ್ರತಿಮೆಗಳನ್ನು ಹೂಳಿಸಬೇಕೆಂದಿರುವರು ಎಂಬುದು ಬರೀ ಊಹಾಪೋಹ!

* * *

ಸೊಸೈಟಿ ಸ್ಥಾಪನೆಗಾಗಿ ನೆಹ್ರೂಜೀಯವರು ಎಂಟು ತಿಂಗಳು ಕಷ್ಟಪಡಬೇಕಾಯ್ತಂತೆ—

—ನಮ್ಮವರಿಗೆ ಬಿಡಿ, ಮೂರೇ ದಿನದಲ್ಲಿ ಮೂರು ಸೊಸೈಟಿ ಸ್ಥಾಪಿಸಿ, ಸರಕಾರದಿಂದ ಮುಂಗಡ ಪಡೆದು, ಮುಚ್ಚಿಸಿಯೇ ಬಿಡುತ್ತಾರೆ!!

* * *

ಹೈದರಾಬಾದಿನಲ್ಲಿ ಫೋಟೋ ಅಂಗಡಿಗಳು ಹರತಾಳ ಆಚರಿಸುತ್ತಿವೆಯಾದ್ದರಿಂದ, ಸಾರ್ವಜನಿಕ ಉತ್ಸವಗಳಲ್ಲಿ ಸಚಿವರುಗಳು ಭಾಗವಹಿಸುವ ಕಾರ್ಯಕ್ರಮಗಳನ್ನೆಲ್ಲಾ ರದ್ದುಮಾಡಿದ್ದಾರಂತೆ.

* * *

ಸರಿಯಾದ ಗಂಟೆ ತೋರಿಸುವ ಗಡಿಯಾರವನ್ನು ರಷ್ಯನ್ ವೈಜ್ಞಾನಿಕರು ಸೃಷ್ಟಿಸಿದ್ದಾರಂತೆ—

—ಅಂದಮೇಲೆ ಮದುವೆ ಮುಹೂರ್ತವನ್ನು ಸಾಧಿಸಬಹುದು!!

* * *

ಕರಾಚಿಯಮೇಲೆ ಸ್ಪೂಟ್ನಿಕ್ ಕಂಡಾಗ, ಅಲ್ಲಿನ ಪ್ರದರ್ಶನಕಾರರು "ಸೋವಿಯಟ್ ಯೂನಿಯನ್ ಮುರ್ದಾಬಾದ್" ಅಂತ ಘಟ್ಟಿಯಾಗಿ ಮಾತೃ ಭಾಷೆಯಲ್ಲಿ ಘೋಷಿಸಿದರಂತೆ.

—ಎಲ್ಲರ ಮುಖಗಳೂ ನಂತರ ಒದ್ದೆಯಾಗಿತ್ತಂತೆ.

*　　　*　　　*

ಅಕ್ಕಪಕ್ಕದಲ್ಲಿ ಪ್ರಕಟವಾದ ಶಿರೋನಾಮೆಗಳು :—

ಪತ್ನಿಯನ್ನು ಕೊಡಲಿಯಿಂದ ಕೊಲೆಮಾಡಿದ—

ಉಪವಾಸ ಮುಕ್ತಾಯ—

*　　　*　　　*

ಬಚ್ಚಲಮನೆ ಗೋಡೆಯಮೇಲೆ ಬೆಳೆದಿರುವ ಪಾಚಿಯಿಂದ ದೇಹ ಬೆಳವಣಿಗೆಗೆ ಅತ್ಯವಶ್ಯಕವಾದ ಅಂಶಗಳನ್ನು ಕಂಡುಹಿಡಿದಿದ್ದಾರಂತೆ.

—ಎಳೆಮಕ್ಕಳು ಇದನ್ನು ಹೇಗೋ ಮೊದಲಿಂದಲೂ ಅರಿತಿದ್ದುವು, ಅಲ್ಲವೇ?

*　　　*　　　*

ಬೆಂಗಳೂರಿನ ವಿಕ್ಟರಿ ಹಾಲ್‌ನಲ್ಲಿ ಪ್ರದರ್ಶಿಸಲ್ಪಟ್ಟಿರುವ ಚಿತ್ರಗಳಿಂದ ಆ ಕಟ್ಟಡವನ್ನೇ ಪೂರ್ಣ ಮುಚ್ಚಬಹುದಂತೆ.

—ಹಾಗೆ ಮಾಡಬಾರದೇ? ಕಬ್ಬನ್‌ಪಾರ್ಕಿನಲ್ಲಿ ನಡೆದರೆ ಆಮೇಲೆ ಕಣ್ಣುರಿ ಬರುವುದಿಲ್ಲ!!

*　　　*　　　*

ಈರುಳ್ಳಿ ಹೋಳನ್ನು ಬಿಡಿಸುತ್ತಾ ಇದ್ದ ಕಾಲೇಜ್ ಹುಡುಗ ಪಕ್ಕದಲ್ಲಿ ಊಟಕ್ಕೆ ಕುಳಿತವನಿಗೆ ಹೇಳಿದನಂತೆ—ಇದೊಳ್ಳೇ ದ್ರೌಪದಿ ತರಕಾರಿ ಕಣೋ! ಎಂದು

*　　　*　　　*

ತರಬಾನ್ ಎಂದರೆ ತಲೆಯ ಪಾಗಲ್ಲವೆಂದೂ, ಸೀರೆಯ ಬಟ್ಟೆಯೆಂದೂ ಕಾಲೇಜ್ ರಮಣಿಯೊಬ್ಬಳು ವಿಶದೀಕರಿಸಿದಳಂತೆ, ಹಳೆಯಕಾಲದ ಗಂಡನಿಗೆ.

*　　　*

ಪಶ್ಚಿಮ ಸಮುದ್ರ ತೀರದಲ್ಲಿ ಬೆಸ್ತರೆಲ್ಲಾ ಈಗೀಗ ಬಂಗಾರ ಹುಡುಕುವ ಕಾರ್ಯದಲ್ಲಿ ಮಗ್ನರಾಗಿದ್ದಾರಂತೆ.

—ಹುಡುಕಿದವನಿಗೆ ಅರ್ಧ ಮಿಕ್ಕಿದ್ದು ಸುಂಕದವನಿಗೆ ಎನ್ನುವುದು ಸುಳ್ಳಂತೆ.

ಮನೆ ಪಾಠಕ್ಕೆ ಇನ್ನೂ

ರಾಮರಾವ್ ನನಗೆ ಹೇಳಿದ್ದು "ಬನ್ನೀ, ಶಾಮಣ್ಣ; ಎರಡು ಅಸಿಸ್ಟೆಂಟ್ ಪ್ರೊಫೆಸರ್‌ಗಿರಿ ವಿಶ್ವವಿದ್ಯಾಲಯದಲ್ಲಿ ಖಾಲಿ ಬಿದ್ದಿದೆಯಂತೆ, ಅಥವಾ ಎರಡು ದಿನಗಳಲ್ಲಿ ಖಾಲಿ ಬೀಳುತ್ತಂತೆ. ನಾವು ಬೆಂಗಳೂರಿನಲ್ಲೇ ಮೊಟ್ಟೆಕೋಳಿಗಳ ಹಾಗೆ ಕೂತುಕೊಂಡಿದ್ದರೆ, ಆ ಖಾಲಿ ಸ್ಥಾನವನ್ನು ಚರಿತ್ರೇಗೋ ಭೂಗೋಳಕ್ಕೋ ಹಂಚಿಬಿಡುತ್ತಾರೆ. ಆದರೆ ಎಲ್ಲರಿಗಿಂತ ಮುಂಚೆ ನಾವು ಹೋಗಿ ಅಧಿಕಾರಿಗಳನ್ನ ಸರಿಮಾಡಿಕೊಂಡರೆ, ಕೆಮಿಸ್ಟ್ರಿಗೊಂದು, ಲೆಖ್ಖಕ್ಕೊಂದು ಅಂತ ಆ ಖಾಲಿ ಸ್ಥಾನ ತುಂಬಿಸಿದರೆ, ನಮ್ಮಿಬ್ಬರಿಗೂ ಸಿಕ್ಕೇಬಿಡುತ್ತೆ. ಲೆಖ್ಖದಲ್ಲಿ ನೀವು. ಕೆಮಿಸ್ಟ್ರಿಯಲ್ಲಿ ನಾನು, ಈ ಪಟ್ಟಕ್ಕೇ ಕಾದಿರೋದು. ಅಂದ ಹಾಗೆ ನಿಮ್ಮ ಮಾವನ ಸಂಬಂಧ ಬೆಳೆಸಬೇಕೂಂತ ಇದಾರಲ್ಲ ಕುಂ. ಪೆ. ಲ. ಉಪಾಧ್ಯಾಯರು ಅವರು ಹೇಳಿದ ಹಾಗೆ ವಿಶ್ವವಿದ್ಯಾಲಯದಲ್ಲಿ ನಡೆದೇ ಹೋಗುತ್ತಂತೆ" ಎಂದು.

ಆಗ ಬೆಳಿಗ್ಗೆ ೭ ಗಂಟೆ. ಇದು ಸಮಯೋಚಿತವಾದ ಸಲಹೆ ಎಂದೂ ಅನ್ನಿಸಿತು. ನಮ್ಮ ಸಹೋದ್ಯೋಗಿ ಲೆಕ್ಚರುಗಳಿಗೆ ಈ ಖಾಲಿ ವಿಷಯ ತಿಳಿಯುವ ಮುನ್ನ ನಾವು ಮುಂಜಾಗ್ರತೆ ವಹಿಸುವುದು ಚೆನ್ನು ಎಂದೂ ಎನ್ನಿಸಿತು. ಆಲಸ್ಯ ಮಮೃತಂ ವಿಷಂ ಕೂಡ ನೆನಪಾಯ್ತು. ಬನ್ನಿ ರಾಮರಾವ್ ಈಗಲೇ ಮೈಸೂರಿಗೆ ಹೊರಡೋಣ ಎಂದು ಇದ್ದಂತೆಯೇ ಸ್ಟೇಷನ ಕಡೆಗೆ ಸಿಕ್ಕಿದ ಆಟೋರಿಕ್ಷಾದಲ್ಲಿ ಕೂತು ಜವರಾಯನ ಕೋಣನಗಿಂತ ವೇಗವಾಗಿ ಸ್ಟೇಷನ್ ತಲಪುವ ವೇಳೆಗೆ ಮೈಸೂರು ರೈಲಿನ ಗಾರ್ಡ್‌ಗಾಡಿ ಓಡಿಹೋಗುತ್ತಿದ್ದುದು ಕಾಣಿಸಿತು.

ನಾನು ಬೇಗ ಲೆಕ್ಕ ಹಾಕಿದೆ. ಇದೇ ಆಟೋರಿಕ್ಷಾವನ್ನು ಮೈಸೂರು ಕಡೆಗೆ ತಿರುಗಿಸಿದರೆ, ಮೈಲಿಗೆ ೨೫ ನಯೇಪೈಸೆ, ೯೦ ಮೈಲಿಗೆ ರೂ. ೨೨-೫೦. ಇದೇ ಇದೇ ವೇಗದಲ್ಲಿ ಹೋದರೆ ೨ ತಾಸು ೪೫ ನಿಮಿಷದಲ್ಲಿ ರೈಲಿಗೆ ಮುಂಚೆ ಮೈಸೂರು ಸೇರಬಹುದು. ಇಬ್ಬರೂ ಬಾಡಿಗೆ ಹಂಚಿಕೊಂಡರೆ ತಲಾ ರೂ. ೧೧-೨೫ ಖರ್ಚು. ಅಸಿಸ್ಟೆಂಟ್ ಪ್ರೊಫೆಸರ ಗಿರಿ ಸಿಕ್ಕಿದರೆ, ತಿಂಗಳಿಗೆ ರೂ. ೧೫ ಭಡ್ತಿ ಸಿಗುತ್ತೆ. ಅದೇನು ಮಹಾ ಎನ್ನುವಹಾಗಿಲ್ಲ. ಏಕೆಂದರೆ, ವರ್ಷಕ್ಕೊಮ್ಮೆ ಪರೀಕ್ಷಕರಾಗಿ ಸಂಸಾರದ ವರ್ಷದ ಬಟ್ಟೆಬರೆ ಖರ್ಚು ದಕ್ಕುತ್ತೆ. ಅಲ್ಲದೆ ಮನೆ ಪಾಠದ ದರ ಸ್ವಾಭಾವಿಕವಾಗಿ, ವಾರಕ್ಕೆ ಮೂರು ಮೂರು ಪಾಠಕ್ಕೆ ಮೂವತ್ತು ಇರೋದು, ವಾರಕ್ಕೆ ಎರಡು ಪಾಠಕ್ಕೆ ಆರವತ್ತು ಆಗೋದು ಸಹಜ. ಅಂದರೆ ಮನೆಯವರು ಋಷಿಪಂಚಮಿ ಆಚರಿಸುವ ಮೊದಲೇ ನಮ್ಮದು ಎಂದು ಒಂದು ಮನೆ ಕಟ್ಟಿಸಿಬಿಡಬಹುದು.... ಇತ್ಯಾದಿ ರೀತಿ.

ರಾಮರಾವ್‌ಗೆ "ನಿನಗೆ ವಿವರ ಮೈಸೂರಿಗೆ ಹೋಗ್ತಾ ಹೋಗ್ತಾ ಲೆಕ್ಕ ಒಪ್ಪಿಸ್ತೀನಿ, ನಾನು ಹೇಳಿದಂತೆ ಕೇಳು" ಎಂದೆ. ಆಟೋರಿಕ್ಷಾದವನಿಗೆ ಮೈಸೂರು ಕಡೆ ಗಾಡಿ ಬಿಡು ಎಂದೆ. ಅವನು ನನ್ನನ್ನು ನೋಡಿದ. ನನ್ನ ಎದೆಯನ್ನು ನೋಡಿದ. 'ಸೈ' ಎಂದ. ಮೈಸೂರು ರಸ್ತೆಗೆ ತಿರುಗಿಸಿಬಿಟ್ಟ.

ಅವನಿಗಿದ್ದ ಹುಮ್ಮಸ್ಸು ಆ ಆಟೋರಿಕ್ಷಾಗಿತ್ತಿಲ್ಲ. ಕಾರಣ ಮೈಸೂರು ಸೇರುವ ವೇಳೆಗೆ ಸಂಜೆ ಐದಾಗಿತ್ತು. ಕೆಂಗೇರಿ ಹತ್ತಿರ ಅದು ಹರತಾಳ ಆಚರಿಸಿತು. ಇದನ್ನು ನೂಕಿಕೊಂಡು ಬೆಂಗಳೂರಿಗೆ ಹೋಗಬೇಕಲ್ರೀ. ಕೊಡ್ರಿ ಹತ್ತು ರೂಪಾಯಿ ಅಂತ ಆತ ಗಲಾಟೆಮಾಡಿ ಇಸುಕೊಂಡ. ನಾವು ಕೆಂಗೇರಿ ಸ್ಟೇಷನ್‌ಗೆ ನಡೆದು ಹೋಗಿ ಮುಂದಿನ ರೈಲು ಹಿಡಿದು ಮೈಸೂರಿಗೆ ಹೋಗಬೇಕಾಯ್ತು. ಮೈಸೂರಿನಲ್ಲಿ ಮಾವ ಬೆಂಗಳೂರಿಗೆ ಹೋಗಿದ್ದಾರೆ ಎಂದು ತಿಳಿಯಬಂತು. ಮಾವನ ಮನೆಯ ಪಕ್ಕದವರು ಹಾಗೆ ಹೇಳಿದರು, ನಾವು ಬೀಗ ಹಾಕಿದ ಆ ಮನೆಗೆ ಹೋದಾಗ. ಬಂದ ದಾರಿಗೆ ಸುಂಕವಿಲ್ಲ ಎಂದು ರಾತ್ರಿ ರೈಲು ಹಿಡಿದು ಬೆಂಗಳೂರಿಗೆ ಬಂದೆವು.

ಕಾಲೇಜಿಗೆ ಹೋದಾಗ, ಅಲ್ಲಿ ತಿಳಿಯಿತು ಸುದ್ದಿ. ಹಿಂದಿನ ದಿನ ಸಿಂಡಿಕೇಟ್ ಸಭೆ ಬೆಂಗಳೂರಲ್ಲಿ ಸೇರಿತ್ತೆಂದೂ ಕುಂಪೇಲ ಉಪಾಧ್ಯಾಯರು ತೆರೆಮರೆಯ ಸನ್ನಾಹದಿಂದಾಗಿ, ತತ್ವಶಾಸ್ತ್ರ, ಭೂಗರ್ಭ ಶಾಸ್ತ್ರಗಳಿಗೆ ಅಸಿಸ್ಟೆಂಟ್ ಪ್ರೊಫೆಸರ್‌ಗಿರಿ ನಮೂದಾಯಿತೆಂದೂ ತಿಳಿಯ ಬಂತು.

ಸಂಜೆ ಮನೆಗೆ ಬರುವ ವೇಳೆಗೆ ನಮ್ಮ ಮನೆಯಲ್ಲಿ ಮಾವನವರು ಇದ್ದರು. "ಶಾಮಣ್ಣಾ! ಈ ದಿನ ಸುದಿನವಪ್ಪಾ, ಮೈಸೂರಲ್ಲಿ ಮೊನ್ನೆ ಸಿಂಡಿಕೇಟ್ ಸಭೆ ಬೆಂಗಳೂರಲ್ಲಿ ಎಂದರು. ಕೆಟ್ಟೆನೋ ಬಿದ್ದೆನೋ ಎಂದು ಓಡಿಬಂದೆ. ಕುಂಪೆಲ ಉಪಾಧ್ಯಾಯರನ್ನು ಬಲವಾಗಿ ಹಿಡಿದೆ. ನಿನ್ನ ನಾದಿನಿಯನ್ನು ಅವರ ಸೋದರಳಿಯನಿಗೆ ತಂದು ಕೊಳ್ಳಬೇಕೂಂತ. ಆತ ಅಂದರು. ಆ ಹುಡುಗನಿಗೆ ಇವತ್ತು ಅಸಿಸ್ಟೆಂಟ್ ಪ್ರೊಫೆಸರ ಗಿರಿ ಕೊಡಿಸಬೇಕೆಂದು ಮಸಲತ್ತು ಮಾಡುತಿದ್ದೇನೆ. ಕೇವಲ ೨೩ ವರ್ಷ ಆದರೆ ಆ ವಿಭಾಗದಲ್ಲಿ ಅವನೇ ಶಹಣೆ. ನಿಮ್ಮ ಮಗಳ ಪುಣ್ಯ ಇದ್ದರೆ, ಈ ದುಃಸ್ಸಾಧ್ಯವಾದ ಕೆಲಸ ಆಗುತ್ತೆ. ಹಾಗಾದರೆ ನಿಮ್ಮ ಹುಡುಗೀನ ತಂದುಕೊಳ್ಳುತ್ತೇನೆ ಎಂದರು. ಈಗ, ಅರ್ಧ ಗಂಟೆ ಮುಂಚೆ ಅಸ್ತು ಎಂದರು. ನಿನಗೆ ಹೇಳಿ ಹೋಗೋಣ, ಮಗಳನ್ನೂ ನೋಡಿದ ಹಾಗಾಗುತ್ತೆ ಅಂತ ನಾನು ಬಂದೆ. ಈಗ ಹೋಟಲಿಗೆ ಹೋಗಿ ನಿಮ್ಮತ್ತೆ ಮಕ್ಕಳನ್ನು ಕರೆದುಕೊಂಡು ಮೈಸೂರಿಗೆ ರಾತ್ರಿ ಹೊರಡುತ್ತೇನೆ" ಎಂದರು.

ಕಾರಣ, ಮನೆ ಪಾಠಕ್ಕೆ ಇನ್ನೂ ಮೂವತ್ತೇ ರೂಪಾಯಿ!

— "ಲೆಕ್ಚರ."

ಇಪ್ಪತ್ತು ರೂಪಾಯಿನ ಒನಕೆ

ವಿದ್ಯಾ ಸಚಿವರು ಒಂದು ಹೇಳಿಕೆ ಇತ್ತು, ತನಿಖೆಗೆ ಏರ್ಪಡಿಸಿದ್ದಾರಂತೆ. ಶಾಲೆಯೊಂದರಲ್ಲಿ ಗೃಹವಿಜ್ಞಾನದ ಪಾಠದ ಸಲುವಾಗಿ ಸರಬರಾಜಾದ ಒನಕೆ ಒಂದಕ್ಕೆ ೨೦ ರೂಪಾಯಿ, ವಂದರಿಗೆ ನಾಲ್ಕು ರೂಪಾಯಿ, ಎಂದು ಖರ್ಚು ಹಾಕಿತ್ತಂತೆ.

ಇದನ್ನು ಕೇಳಿದಮೇಲೆ ಇದೆಂತಹ ಒನಕೆ, ಇದೆಂತಹ ವಂದರಿ ಎಂದು ಸಹಜವಾಗಿ ಎಲ್ಲರೂ ಕೆರಳುವುದು ಸ್ವಾಭಾವಿಕ. ಅಂತೆಯೇ ನಮಗೂ ಪತ್ರಿಕಾ ಕದನ ಕುತೂಹಲ ಕೆರಳಿತು. ನಮ್ಮ ಬಾತ್ಮೀದಾರರನ್ನು ಅಲ್ಲಿಗೆ ಅಟ್ಟಿದೆವು. ಆತ ಎಲ್ಲವನ್ನೂ ಕೂಲಂಕುಶಿಯಾಗಿ ವಿಚಾರಿಸಿ, ಪ್ರಯೋಗ ನಡೆಸಿ,ಏನೂ ಅಚಾತುರ್ಯವಾಗಿಲ್ಲ. ಈ ಒನಕೆ ಸಾಧಾರಣ ಒನಕೆ ಅಲ್ಲ. ವಂದರಿಯಾದರೂ ಸ್ವರ್ಗದಲ್ಲಿರಬೇಕಾದ್ದು. ಅವುಗಳಿಗೆ ತೆತ್ತ ಹಣ ಬಲು ಕಡಿಮೆ ಎಂದು ವರದಿ ಒಪ್ಪಿಸಿದ್ದಾನೆ.

ಸಮತಾ ಸಮಾಜದಲ್ಲಿ ಸರ್ವರಿಗೂ ಸತ್ಯ ತಿಳಿಯಬೇಕೆಂಬ ಧೃಡಾಕಾಂಕ್ಷೆಯಿಂದ ನಮ್ಮ ವರದಿಗಾರನ ವರದಿಯನ್ನು ಪ್ರಕಟಿಸಿದ್ದೇವೆ.

ಸಂಪಾದಕರಿಗೆ,

ನಿಮ್ಮ ಆಣತಿಯಂತೆ ಈ ಕೊಂಪೆಗೆ ಬಂದೆ. ನಿಲ್ಲಲು ಕೂಡಲು ಉಣ್ಣಲು ತಿನ್ನಲು ಸೌಕರ್ಯವಿಲ್ಲದ ಕಾರಣ ನೇರನೆ ಶಾಲೆಗೆ ಬಂದೆ. ಹೆಡ್‌ಮಾಸ್ತರಿಣಿಯನ್ನು ಕಂಡೆ. 'ಒನಕೆ ಎಲ್ಲಿ' ಎಂದೆ. ನಿನಗೇನು ಹುಚ್ಚೋ ಎಂದಳಾಕೆ. ನಾನು ಪತ್ರಿಕಾ ವರದಿಗಾರ ಎಂದು ಹೋದ ವರ್ಷದ ಎರಡು ಸಂಚಿಕೆ ತೋರಿಸಿದೆ. 'ಇಲ್ಲಿ ಬನ್ನಿ' ಎಂದು ತನ್ನ ಕೊಠಡಿಗೆ ಕರೆದುಕೊಂಡು ಹೋದಳಾಕೆ. ಮೂಲೆಯಲ್ಲಿದ್ದ ಒನಕೆಯನ್ನು ತೋರಿಸಿದಳಾಕೆ. ಇಪ್ಪತ್ತು ರೂಪಾಯಿ ಕೊಟ್ಟಿದ್ದರೂ ಅದು ಕಂಚಿ ಕಡೆ ಒನಕೆಯಂತಿತ್ತು. ಸ್ವಲ್ಪ ಕುಳ್ಳೇ ಅನ್ನಬಹುದು. ಆದರೂ ಎರಡೂ ತುದಿಗಳಲ್ಲೂ ಎರಡು ಬಳೆ ತೊಡಿಸಿತ್ತು. ಹೊಸದಾಗಿ ಮಾಡಿಸಿದರೆ ೫೦ ನಯೇಪೈಸಾ ಆಗಬಹುದು ಎನ್ನುವಂತಿತ್ತು. ಹತ್ತಿರ ಹೋದೆ. ಆದನ್ನು ಬಲಗೈಯಲ್ಲಿ ತಟ್ಟಿದೆ. ವೈಝುಂ ಎಂದಿತು....ಯಾವುದೋ ಅಶರೀರವಾಕ್ಕು ನನ್ನ ಕಿವಿಯಲ್ಲಿ ಮಾತ್ರ. "ಮೆಲ್ಲಗಿವನನು ಮುಟ್ಟು—ಏನು ಕೋಮಲಕಾಯ ಎಂತ ಹೊಸ ಪ್ರಾಯ" ಎಂದು ಹೇಳಿತು.

ಮೆಲ್ಲಗೆ ಮುಟ್ಟಿದೆ. ಆಗ ಮ್ಯೆ ಝುಂ ಎನ್ನಲಿಲ್ಲ. "ಒರಳಲ್ಲಿ ಏನನ್ನು ಬೇಕಾದರೂ ಹಾಕಿ ಈ ಒನಕೆಯಿಂದ ಕುಟ್ಟು. ನೀನು ಬಯಸಿದ್ದು ಸಿಗುತ್ತೆ" ಎಂದಿತು ಅಶರೀರವಾಣಿ. ಒನಕೆ ಸರಬರಾಜು ಮಾಡಿದೋರು ಒರಳು ಸಪ್ಲೈ ಮಾಡಲಿಲ್ಲವೇ ಎಂದು ಹೆಡ್‌ಮಾಸ್ತರಿಣಿಯನ್ನು ವಿನಯದಿಂದ ಕೇಳಿದೆ.

"ಈ ಶಾಲೆ ಮೊದಲು ಮನೆಯಾಗಿತ್ತು, ಅಲ್ಲಿದೆ ನೋಡಿ" ಎಂದು ನೆಟ್ಟಿದ್ದ ಒರಳನ್ನು ತೋರಿಸಿದಳು.

ಒನಕೆಯನ್ನು ಹಗೂರಾಗಿ ಹಿಡಿದುಕೊಂಡು, ಒರಳಲ್ಲಿ ಸ್ವಲ್ಪ ಭತ್ತವನ್ನು ಹಾಕಿ, "ಭಗವಂತಾ! ಈಗ ಸ್ವಲ್ಪ ಅರಳ್ಹಿಟ್ಟು ದಯಪಾಲಿಸು, ಹಸಿವಾಗುತ್ತಿದೆ" ಎಂದು ದೇವರಿಗೆ ಪ್ರಾರ್ಥಿಸಿ ಒಮ್ಮೆ ಒನಕೆಯಿಂದ ಕುಟ್ಟಿದೆ. ಮೂರೇಬಾರಿ ಕುಟ್ಟಿದ್ದು ನೋಡಿ ಒರಳು ತುಂಬ ಅರಳ್ಹಿಟ್ಟು ತುಂಬಿತು. ಒಂದು ಹಿಡಿ ತಿಂದೆ ಹಿತವಾಗಿತ್ತು. ಎರಡು ಹಿಡಿ ತಿಂದೆ, ಹೊಟ್ಟೆ ತುಂಬಿತು. ಮೂರನೆ ಹಿಡಿ ತಿಂದಾಗ ತಂಪಾಯ್ತು. ಹೆಡ್‌ಮಾಸ್ತರಿಣಿ ಒಂದು ಹಿಡಿ ತಿಂದು ತೇಗಿದಳು.

ಅಶರೀರವಾಣಿ ಹೇಳಿದ್ದು ದಿಟ. ಈ ಒನಕೆ ಸಾಮಾನ್ಯದಲ್ಲ. ಕಲ್ಪವೃಕ್ಷದ ತುಂಡಿನಿಂದಲೇ ರಚಿಸಲ್ಪಟ್ಟಿದ್ದಿರಬೇಕು. ಇನ್ನೊಂದು ಸಾರಿ ಪ್ರಯೋಗಮಾಡಿ ನೋಡೋಣ ಎಂದು ಒರಳನ್ನು ಸಫಾಗೊಳಿಸಿ ಈ ಸಾರಿ ರಾಗಿ ಹುರಿಟ್ಟು ಬೇಕು ಎಂದು ಪ್ರಾರ್ಥಿಸಿ, ಒನಕೆ ಪ್ರಯೋಗಿಸಿದೆ. ಏನಾಶ್ಚರ್ಯ ಅಂತೀರಿ ರಾಗಿ ಹುರಿಟ್ಟು ತುಂಬಿ ಬಂತು. ಖಾರದ ರಾಗಿಹಿಟ್ಟು ಬಯಸಿದ್ದೆನಾದ್ದರಿಂದ, ಹಗೂರಾಗಿ ಚಟ್ನಿಪುಡಿ ಕಲೆಸಿದ ಹುರಿಟ್ಟೇ ಬಂತು. ಆಗ ನನಗೆ ಮುಂದಟ್ಟಾಯಿತು. ಈ ಒನಕೆಗೆ ೨೦ ರೂಪಾಯಿ ಕೊಟ್ಟಿದ್ದು ಏನೂ ಹೆಚ್ಚಲ್ಲ. ಇಂತಹ ಕಲ್ಪವೃಕ್ಷದ ಒನಕೆಗೆ ಜೀವನವನ್ನೇ ಒತ್ತೆ ಇಡಬಹುದು ಎನ್ನಿಸಿತು. ಈ ವ್ಯಾಪಾರದಲ್ಲಿ ಮಾರಿದವನ ಮೇಲೆ ಅಪವಾದ ಬರಲೇಬಾರದು, ಎಂದೂ ಅನ್ನಿಸಿತು.

ಅನಂತರ ನಾಲ್ಕು ರೂಪಾಯಿನ ವಂದರಿ ಎಲ್ಲಿ ಎಂದು ಕೇಳಿದೆ. ಮೇಜಿನ ಕೆಳಗೆ, ಕಸದ ಬುಟ್ಟಿಯಮೇಲೆ ಅದನ್ನಿಟ್ಟಿದ್ದಳಾಕೆ. ಅದನ್ನು ತೆಗೆದು ಮೇಜಿನ ಮೇಲಿಟ್ಟಳು. ನೋಡುಕ್ಕೇನೋ ಬಿದುರಿನ ಸಾಧಾರಣ ವಂದರಿಯ ಮಾದರಿಯಲ್ಲೇ ಇತ್ತು. ಯಾವ ವಂದರಿಯಲ್ಲಿ ಯಾವ ಮಾಯೆಯೋ ಎಂದುಕೊಂಡೇ ಅದನ್ನು ಹೆದರಿ ಬೆದರುತ್ತಾ ನಯವಾಗಿ ಅಂಚು ಮುಟ್ಟಿದೆ. ನನ್ನ ಬೆರಳು ವಂದರಿಗೆ ಅಂಟು ಬಿತ್ತು. ಕೈ ಬಿಡಿಸಿಕೊಳ್ಳಲು ಮನಸ್ಸೂ ಆಗಲಿಲ್ಲ. ಪ್ರಯತ್ನವನ್ನೂ ಮಾಡಲಿಲ್ಲ.

ಹೆಡ್‌ಮಾಸ್ತರಿಣಿ ಅಂದಳಾಗ, "ವಂದರೀನ ಯಾಕ್ರೀ ಅಷ್ಟುಹೊತ್ತಿನಿಂದ ಹಾಗೆ ಹಿಡಿದುಕೊಂಡಿದ್ದೀರಿ" ಅಂತ.

ಸುಮ್ಮಸುಮ್ಮನೆ ಹಿಡಿದುಕೊಂಡಿದ್ದೆ ಎಂದು ಹೇಳಿ ಕೈ ಎತ್ತಹೋದೆ. ಕೈಯಿನ ಜತೆಗೆ ವಂದರೀನೂ ಮೇಲಕ್ಕೆದ್ದಿತು. ನಾನು ಹಿಡಿದುಕೊಂಡಿರಲೇ ಇಲ್ಲ. "ಎಲಎಲಾ! ಇದರ ಮರ್ಮ ಏನಿರಬಹುದು? ಅದಿಲ್ಲದೆ ಇದ್ದರೆ ನಾಲ್ಕುರೂಪಾಯಿ ಯಾಕೆ ಕೇಳುತ್ತಿದ್ದರು, ಏನೋ ಮಾಯೆಯಿರಬೇಕು ಎಂದುಕೊಳ್ಳುತ್ತಿದ್ದಾಗ ಸೂರಿನ ಅಂಚಿನಲ್ಲಿದ್ದ ಹಲ್ಲಿ ಸೂರಿನಮೇಲೆ ಲೊಚಗುಟ್ಟುತ್ತಾ ಹರಿಯಿತು. ವಂದರಿ ಮೇಲಕ್ಕೆ ಸರಿಯಾಗಿ ಬಂದಾಗ ಬಿತ್ತು. ಏನಾಶ್ಚರ್ಯ ಅಂತೀರಿ. ವಂದರೀ ತೂತು ಕಾಲಂಗುಲ ಅಗಲ ಇರಬಹುದು, ಹಲ್ಲಿ ಮುಕ್ಕಾಲಂಗುಲ ದಪ್ಪವಿತ್ತು. ಆದರೂ ಬಿದ್ದ ಹಲ್ಲಿ ವಂದರಿ ಒಳಗಿಂದ ನೆಲಕ್ಕೆ ಬಿದ್ದೇ ಬಿಡ್ತು. ಹೆಡ್‌ಮಾಸ್ತರಿಣಿಯನ್ನು ನೋಡಿದೆ. ಆಕೆ, ಮೂಗಿನಲ್ಲಿದ್ದ ವಜ್ರದ ಬೊಟ್ಟಿನಮೇಲೆ, ಕೆಂಪಿನುಂಗುರ ಇದ್ದ ಬೆರಳನ್ನು ಇಟ್ಟು ಆಶ್ಚರ್ಯಚಕಿತಳಾಗಿ ನಡುಗುತ್ತಿದ್ದಳು. ಇದೇನೋ ದೆವ್ವದಕಾಟ ಇರಬಹುದೇನೋ ಎಂಬ ಭಯ ಮೂಡಿದಂತಿತ್ತು, ಆಕೆಯ ಮುಖದ ಮೇಲಿನ ಕಳೆ.

ಆ ವೇಳೆಗೆ ಶಾಲಾ ಜವಾನ ಬಂದ. ನಿದ್ರೆಯಲ್ಲಿದ್ದವನಂತೇ ಕಂಡುಬಂದ. ಒರಳಿನಲ್ಲಿದ್ದ ಹಿಟ್ಟನ್ನು ಒಂದು ಹಿಡಿ ತೆಗೆದು ವಂದರಿಗೆ ಹಾಕಿದ. ಯಾವುದೋ ಒಂದು ರೀತಿಯ ಮಂಕು ಬಡಿದು, ತಾಂತ್ರಿಕವಾಗಿ ಅವ ಇದೆಲ್ಲವನ್ನೂ ಮಾಡಿದಂತೆ ಇತ್ತು.

ಹಲ್ಲಿಯನ್ನು ಕೆಳಗಿಳಿಸಿದ ವಂದರಿ ಹಿಟ್ಟನ್ನು ಹಾಗೆಯೇ ಹಿಡಿದಿತ್ತು. ಜವಾನ ಮೂರ್ಛೆ ಬಿದ್ದ. ತಿರುಗಿ ಎದ್ದು ಕಣ್ಣೊರೆಸಿಕೊಂಡ. ಹೆಡ್‌ಮಾಸ್ತರಿಣಿಯನ್ನು ನೋಡಿದ. "ಹೊರಗೆ ಸ್ಟೂಲಿನಮೇಲೆ ಕುಂತು ನಿದ್ರೆಮಾಡ್ತಾ ಇದ್ದೆ. ಯಾರೋ ಬಂದು ಒದ್ದು ಎಬ್ಬಿಸಿ ಒರಳಿನಲ್ಲಿ ಹಿಟ್ಟದೆ ವಂದರೀಗೆ ಹಾಕು ಎಂದರು. ಹಾಗೇ ಮಾಡಿದೆ. ಆ ವಂದರೀಲಿ ತಿನ್ನುವ ಪದಾರ್ಥ ಮಾತ್ರ ಮೇಲುಳಿಯುತ್ತೆ. ಮಿಕ್ಕಿದ್ದೆಲ್ಲಾ ಕೆಳಗೆ ಬೀಳುತ್ತೆ ಅಂದಹಾಗಾಯ್ತು ಎಂದ.

ಇರಬಹುದೇನೋ ಅಂತ ಹೋಟಲಿನಿಂದ ಪಕೋಡಾ ದೋಸೆ ತರಿಸಿ ವಂದರೀಗೆ ಹಾಕಿದೆವು. ಕೆಳಕ್ಕೆ ಬಿತ್ತು. ಮಾಸ್ತರಿಣಿ ಮನೆಯಿಂದ ಅನ್ನ ಸಾರು ತರಿಸಿ ಪರೀಕ್ಷೆಮಾಡಲೋಸುಗ ಹಾಕಿದೆವು. ವಂದರಿಮೇಲೇ ಉಳಿಯಿತು.

ಸಂಸಾರಕ್ಕೆ ಇಂತಹ ಮಾಯಾ ವಂದರೀ ಎಷ್ಟು ಪ್ರಯೋಜನ ಅಂತ ವಿವರಿಸ ಬೇಕೇ? ಇದಕ್ಕೆ ನಾಲ್ಕು ರೂಪಾಯಿ ಅಗ್ಗ ಅಲ್ಲವೇ?

ನಾನೇನೋ ಈ ವಂದರೀ ಈ ಒನಕೆ ಸಿಕ್ಕಿದರೆ ದಕ್ಕಿಸಿಕೊಳ್ಳೋಣ ಅಂತ ಇಲ್ಲೇ ಒಂದೆರಡು ದಿನ ಇರುತ್ತೇನೆ.

ಮುಂದಕ್ಕೆ ಕಾಗದ ಬರೆಯುತ್ತೇನೆ.

— ವರದಿಗಾರ.

ಗಂಟಲು ಕೆರೆತ

"ಯಾಕೆ ಇಷ್ಟು ರಂಪ! ಅವಕ್ಕೆ ಏನೂ ಆಗಿಲ್ಲ....ಗಂಟಲು ಕೆರೆತ ಅಂತ ಅವೇ ಹೇಳುತ್ತಾ ಇವೆಯಲ್ಲ... ಪುಳಿಯೋಗರೆ ತಿಂದರೆ ಹಾಗಾಗುವುದುಂಟು.... ಅದನ್ನು ಇಬ್ಬರೂ ತಿಂದೇ ಇದಾರೆ....ಬೆಳಗಾದರೆ, ಸರಿಹೋಗುತ್ತೆ ... ಗಂಟಲು ಕೆರೆಯುತ್ತಾ ಇದೆ, ಅಂತ ಅವರು ಹೇಳುತ್ತಾರೆ, ಅಷ್ಟೆ ತಾನೆ? ಗಂಟಲಲ್ಲಿ ಏನಾಗುತ್ತಾ ಇದೆಯೋ? ಅವು ಏನು ಹೇಳುತ್ತಿವೆಯೋ? ಒಂದಕ್ಕೊಂದು ಸಂಬಂಧ ಎಂಥದ್ದೋ ಏನೋ" ಎಂದರು, ರಾಮನಾರಾಯಣ. 'ಇರಬಹುದು' ಅಂದಳು. ಲಕ್ಷ್ಮಮ್ಮ...."ಆದರೆ, ಡಿಗ್ರಿ? ಡಿಗ್ರಿ ನೋಡಿದಾಗ 100 ಇತ್ತಲ್ಲಾ" "ಬಿಡು! ನೂರು ಅನ್ನೋದು ಒಂದು ಮಹಾ ಜ್ವರವೇನು? ಹುಡುಗರಿಗೇನು, ಹಗಲೆಲ್ಲ ಬಿಸಿಲಲ್ಲೇ ಓಡಾಡುತ್ತವೆ ...ಸಂಜೆಯಾದರೆ, ಮೈಗೆ ಕಾವು ಹತ್ತಿ ಕೊಂಚ ಬಿಸಿ ಏರುವುದು ಸಹಜ?" ಎಂದು ರಾಮನಾರಾಯಣ ಗೊಣಗಿದ. "ಮಲಗಿ ನಿದ್ದೆ ಮಾಡುತ್ತಿವೆ, ಈಗೇಕೆ ಚಿಂತೆ" ಎನ್ನುತ್ತ ಆತ, ಇಬ್ಬರ ಮಕ್ಕಳ ಮೈಮೇಲೂ, ಒಂದು ಶಾಲನ್ನೆಳೆದ.

"ಇವತ್ತು ಗಂಟಲು ಕೆರೆತ, ನಾಳೆ ನೆಗಡಿ, ನಾಳಿದ್ದು ನ್ಯೂಮೋನಿಯಾ" ಎಂದು ಲಕ್ಷ್ಮಮ್ಮನವರು ಅಳುವುದಕ್ಕೆ ಮೊದಲುಮಾಡಿದರು. ಡಾಕ್ಟರನ್ನು ಕರೆದುಕೊಂಡು ಬನ್ನಿ ಬೇಗ, ಕೋಟು ಹಾಕಿಕೊಳ್ಳಿ" ಎಂದು ಆಕೆ ಒತ್ತಾಯಮಾಡಿದಳು. "ಏನೇ ಇದು! ಇಷ್ಟು ಹೊತ್ತಿನಲ್ಲಿ, ಈ ಹೀಚುಗಳ ಗಂಟಲು ಪುಳಿಯೋಗರೆ ತಿಂದು ಕೊಂಚ ಕೆರೆತ ಕೊಡುತ್ತದೆ ಎಂಬ ಕಾರಣಕ್ಕಾಗಿ, ಅಂಥ ಭಾರಿ ಡಾಕ್ಟರನ್ನ ಕಾರಲ್ಲಿ ಇಲ್ಲಿಯ ತನಕ ಬರುವ ಹಾಗೆ ನಾವು ಪೀಡಿಸಬಹುದೆ?" ಎಂದ ರಾಮನಾರಾಯಣ. "ಅವರು ಬಂದರೆ ತಾನೆ ಏನು ಮಹಾ ಮಾಡುತ್ತಾರೆ, ನಿದ್ದೆಮಾಡುವ ಮಕ್ಕಳನ್ನೆಬ್ಬಿಸಿ ತಮ್ಮ ತೊಡೆಯ ಮೇಲೆ ಕೂರಿಸಿಕೊಂಡು ಅವರ ಹೊಟ್ಟೆಮೇಲೆ ಗುದ್ದಿ, ಆ ಎನ್ನಿಸಿ, ಬಿಸಿ ನೀರಲ್ಲಿ ಉಪ್ಪು ಕಲಸಿ ಕುಡಿಸಿ, ಎನ್ನುವುದು, ಅಷ್ಟೇ ತಾನೆ?" ಎಂದು ನಕ್ಕ.

ಲಕ್ಷ್ಮಮ್ಮನಿಗೆ ರೇಗಿತು. ಬೇಡಿ, ನಗಬೇಡಿ. ಈಗ ನಕ್ಕರೆ, ನಾಳೆ ಅಳಬೇಕಾಗಿ ಬರುತ್ತೆ, ಎಂದಳು. ಆಗ, ರಾಮನಾರಾಯಣನೂ ಕೊಂಚ ಹುಷಾರಾದ. "ತಾಳು, ಲಕ್ಷ್ಮಿ! ಮಕ್ಕಳನ್ನೆಬ್ಬಿಸಿ, ಅವಕ್ಕೆ ಏನಾದರೂ ಔಷಧಿ ಕುಡಿಸಲೇ ಬೇಕು,

ಎಂದರೆ, ನಮ್ಮ ಮನೆಯಲ್ಲಿ ಔಷಧಗಳಿಗೇನು ಕಡಮೆ....ಇಗೋ! ಈ ಬೀರುವಿನಲ್ಲೇ ಐವತ್ತಾರು ಸೀಸೆಗಳಿವೆ...."ಎನ್ನುತ್ತ ರಾಮನಾರಾಯಣ, ಬೀರು ಬಾಗಿಲು ತೆಗೆದ. ಒಂದು ಶೀಷೆಯನ್ನ ಹೊರತೆಗೆದ...."ಇಕೋ! ಹೋದ ಸಲ, ಶೀನ ಕೆಮ್ಮಿದಾಗ, ನಾವು ಇದನ್ನೇ ತಾನೆ ಕೊಡುತ್ತಾ ಇದ್ದದ್ದು ?" ಎಂದ. ಲಕ್ಷಮ್ಮ ಅದರೊಳಗಿನ ದ್ರಾವಕದ ವಾಸನೆಯನ್ನು ಮೂಗಿಂದ ಹೀರಿ ಅಸಹ್ಯಾನುಭವದ ಪ್ರದರ್ಶನವೊಂದನ್ನು ಬೀರಿದಳು. "ಗಂಟಲು ಔಷಧಿಯ ವಾಸನೆಯೇ ಇಲ್ಲ, ಇದರಲ್ಲಿ... ಬೂಟ್ ಪಾಲೀಷ್ ಇದ್ದ ಹಾಗಿದೆ" ಎಂದಳು. ಛೆ! ಛೆ! ಬೂಟ್ ಪಾಲೀಷ್ ಅಲ್ಲ ಇದು. ಚೆನ್ನಾಗಿ ಕುಲುಕುತ್ತೇನೆ.... ಈಗ ನೋಡು ವಾಸನೇನ" ಎಂದ, ರಾಮನಾರಾಯಣ. ಕುಲುಕಿದಾಗ, ಅದರ ವಾಸನೆ ಬೇರೆಯಾಯಿತಾದರೂ, ಕಿವಿಗೆ ಹುಯ್ಯುವ ದ್ರಾವಕದ ವಾಸನೆಯಾಗಿತ್ತು ಅದು. ಗಂಟಲಿಗೆ ಸವರುವ ಔಷಧಿಯ ವಾಸನೆಯಾಗಿರಲಿಲ್ಲ. ಆಗ, ಲಕ್ಷ್ಮಮ್ಮನಿಗೆ ನೆನಪಾಯಿತು....ಹುಳುಕಡ್ಡಿಗೆ ಸವರುವ ದ್ರಾವಕ ಅದು, ಅಂತ.

ಸರಿ! ಆ ಸೀಸೆಯನ್ನು ಒಂದು ಮೂಲೆಯಲ್ಲಿರಿಸಿ, ಮತ್ತೊಂದನ್ನು ಕೈಗೆ ತೆಗೆದ, ರಾಮನಾರಾಯಣ ಅದನ್ನ ನೋಡುತ್ತಲೂ ಲಕ್ಷಮ್ಮನಿಗೆ ತಿಳಿಯಿತು, ದಡಾರದ ಔಷಧಿ ಅಂತ. "ಮತ್ತೆ ಅದನ್ನೇಕೆ ಇಷ್ಟು ಜೋಪಾನವಾಗಿ ಇಟ್ಟುಕೊಂಡಿದೀಯಾ....ದಡಾರ ಒಮ್ಮೆ ಬಂದ ಮೇಲೆ ಮತ್ತೆ ಬರುವುದಿಲ್ಲ ಅಂತ ತಿಳಿಯದೆ ನಿನಗೆ ?" ಎಂದು ರಾಮನಾರಾಯಣ, ರೇಗಿದ.

"ಹಾ! ಇದನ್ನೇ ಒಂದೊಂದು ಕೊಡೋಣ" ಅಂತ. ಅವನು ಒಂದು ಗುಳಿಗೆ ಡಬ್ಬಿ ತೆಗೆದ. ಲಕ್ಷಮ್ಮ ಅದನ್ನ ಅವನ ಕೈಯಿಂದ ಕಿತ್ತು ಪರೀಕ್ಷಿಸಿದಳು. "ಬೇಡಿ, ಬೇಡಿ! ಇದು ಭೇದಿಗೆ ಶ್ರೇಷ್ಠ ಅಂತ ನಾವು ಅವತ್ತು ಕೊಂಡುತಂದು, ನೀವು ಒಂದು ತಿಂದು, ಉಳಿದ 24 ಹಾಗೆಯೇ ಇದೆ....25ರ ಡಬ್ಬಿಯಲ್ಲವೆ ಇದು....ಒಂದಕ್ಕೆ ಎರಡಾಣೆ, 25ಕ್ಕೆ 3 ರೂಪಾಯಿ ಅಂದಾಗ, 2 ಆಣೆ ಲಾಭ ಬರುತ್ತದಲ್ಲಾ ಅಂತ ನೀವು ಈ ಡಬ್ಬಿಯನ್ನೇ ತಂದಿರಿ...." ಎಂದು ಅದರ ಚರಿತ್ರೆಯನ್ನು ಲಕ್ಷಮ್ಮ ಒಪ್ಪಿಸಿದಳು. ಕೊನೆಗೆ, ನಿದ್ರೆ ತರಿಸುವ ಗುಳಿಗೆ ಒಂದನ್ನು ಒಬ್ಬೊಬ್ಬರ ಬಾಯಿಗೂ ಹಾಕುವುದು ಅಂತ ಅವರು ನಿಶ್ಚಯಿಸಿದರು. ಹುಡುಗರಿಬ್ಬರನ್ನು ಎಬ್ಬಿಸಿ, ಗುಳಿಗೆ ನುಂಗಿಸಿ, ಮತ್ತೆ ಮಲಗಿಸಿದರು.

—ಕಾಮತ್.

ಹಾ—ಮಕ್ಕಳಿರಾ!

"ಲೈಕಾ—ಸ್ಪೂಟ್ನಿಕ್‌ನಿಂದ ಹಿಂತಿರುಗಿದರೂ ಹಿಂತಿರುಗಬಹುದು—ಆದರೆ—ನಾವು ತಲಕಾಡು ಯಾತ್ರೆ ಮುಗಿಸಿ ಹಿಂತಿರುಗುವ ಸೂಚನೆ ಇಲ್ಲ!"

ಚಂದಿಯ ವಗರಾದ ಈ ಮಾತಿಗೆ ಕಾರಣವೂ ಇತ್ತು. 'ಫ್ಲೂ' ಇಂದ ಎದ್ದ ಮೇಲೆ ಸುಮಾರು ಒಂದು ವಾರದ ದಾಡಿ ಕೆರೆಯುವುದಕ್ಕೆಂದು ಐದು ಸ್ವದೇಶಿ ಬ್ಲೇಡು ಗಳನ್ನುಪಯೋಗಿಸಿ ಒಂದೇ ಒಂದು ಕೆನ್ನೆಯಲ್ಲಿ ಒಂದೇ ಒಂದು ಚದುರ ಸೆಂಟಿ ಮಿಾಟರ್ ಅಗಲದಷ್ಟು ಜಾಗ ಖಾಲಿಮಾಡಿ ಒಂದು ಪಾವಷ್ಟು ರಕ್ತ ಸುರಿಸಿಕೊಂಡು ಅವನ ಮನಸ್ಸು ಕೆಟ್ಟಿತ್ತು. ಕುಲಗೆಟ್ಟಿತ್ತು.

"ಲೈಕಾ ಹಿಂತಿರುಗುವುದಿಲ್ಲ" ಅಂದ ರಾಜ,

"ಸರಿ—ನಾವೂ ಡಿಟ್ಟೋ" ಅಂದ ಚಂದಿ.

ನಾನು ಸುಮ್ಮನಿದ್ದೆ. ನನಗೆ ಯಾವ ರೀತಿಯಾದರೂ ಸಮ್ಮತವೇ. ನಾನು ಕೇವಲ ಮೂರು ಸ್ವದೇಶಿ ಬ್ಲೇಡುಗಳನ್ನುಪಯೋಗಿಸಿ ಪ್ರಯೋಜನ ಕಾಣದೆ ಕಡೆಗೆ ಖಾಲಿ ಜಿಲೆಟ್ ಸೆಟ್ಟನಿಂದ ಕೆರೆದುಕೊಂಡು ತೃಪ್ತನಾಗಿದ್ದೆ.

ರಾಜ—"ಕ್ಲೀನ್ ಷೇವ್ ಷೇವಿಂಗ್ ಸೆಲೂನಿ"ಗೆ ಹೋಗಿ ಮೂರು ಕಡೆ ಪಳಾಸ್ತ್ರಿ ಅಂಟಿಸಿಕೊಂಡು ಬಂದು ತಲೆ ಬಾಚಿಕೊಳ್ಳುತ್ತಿದ್ದ.

ಹಿರೇಬೈಲೂರು ಬಿಟ್ಟು ಕಿರೇಬೈಲೂರು ಸೇರಿದ್ದೆವು. ಹಿರೇಬೈಲೂರಿಂದ ಕಿರೇ ಬೈಲೂರು ಕೇವಲ ಒಂಭತ್ತು ಮೈಲಿಗಳಾದರೂ ನಮಗೆ ತೊಂಭತ್ತು ಮೈಲಿಗಳಷ್ಟು ದೂರ ತುಳಿದಷ್ಟು ಸುಸ್ತಾಗಿತ್ತು. ಅಯ್ಯೋ—ರಷ್ಯನರು ನಮ್ಮ ಯಾತ್ರೆಗಾಗಿ—ಒಂದು "ಭೂ ಸ್ಪೂಟ್ನಿಕ್" ಕಳುಹಿಸಬಾರದೇ — ಅನ್ನಿಸಿತು! ಕಿರೇಬೈಲೂರು "ಅಶೋಕಾ ರೆಸ್ಟೊರೆಂಟ್" ಎದುರಿಗೆ ನಮ್ಮ ಸ್ಪೂಟ್ನಿಕ್‌ಗಳು ನಿಂತವು.

"ಖಾಲಿ ಇಡ್ಲಿ—ಕಾಫಿ ಸಾಕು. ಬೇರೆ ಏನೂ ಬೇಡ" ಅಂದ ರಾಜ.

"ಇಡ್ಲಿಗಿಂತ ಖಾಲಿ ದೋಸೆ ವಾಸಿ—ಆದರಿಂದ ಆರೋಗ್ಯ ಅಷ್ಟಾಗಿ ಕೆಡೊಲ್ಲ" ಅಂದ ಚಂದಿ.

"ದೋಸೆಗಿಂತ ಇಡ್ಲಿ ಬೆಟರ್ರು—ಆವೀಲಿ ಬೆಂದಿದ್ದು."

"ನಿನ್ನ ಅವೀಗಿಷ್ಟು ಬೆಂಕಿಹಾಕ್ತು. ಈ ಕಡೆ ಅವೀಲಿ ಶಾಖವೇ ಇಲ್ಲ—ಹಿಟ್ಟೆಟ್ಟು ಹಾಗೇ ಇರುತ್ತೆ—ದೋಸೇನೇ ವಾಸಿ....ಏನಯ್ಯಾ?"—ಅಂದ ಚಂದಿ ನನ್ನ ಕಡೆ ತಿರುಗಿ.

"ನಮ್ಮ ಆರೋಗ್ಯ ಈಗಿನ ಸ್ಥಿತಿಗಿಂತ ಇನ್ನು ಹೆಚ್ಚು ಕೆಡೋ ಹಾಗಿಲ್ಲ—ಇಡ್ಲಿ ದೋಸೆ—ಎರಡೂ ಆಗಬಹುದು" ಅಂದೆ.

"ನೀನೊಬ್ಬ ಹೊಟ್ಟೆಬಾಕ!" ಅಂದ. ಎಂದೂ ಹೀಗೆಯೇ – ನಾನೇನಾದರೂ ಸರಿಯಾಗಿ ಯೋಚಿಸಿ ಒಳ್ಳೆಯ ಸಲಹೆ ಕೊಟ್ಟರೆ ನನ್ನ ಸ್ನೇಹಿತರಿಂದ ಸಿಗೋ ಪ್ರತಿಫಲ— ಇದು! ಹಾಗಿದ್ದ ಮೇಲೆ ನನ್ನ ಕೇಳೋದೇತಕ್ಕೆ?

"ಅಶೋಕಾ ರೆಸ್ಟ್ರೆಂಟನಲ್ಲಿ ಮೊನ್ನೆಯ ಮುರುಕು ನಿನ್ನೆಯ ಬಿಸ್ಕೂತಾಂಬೊಡೆ ಬಿಟ್ಟು ಬೇರೇನೂ ಇರಲಿಲ್ಲ. ಅವುಗಳನ್ನೇ ತಿಂದು ಮಾಣಿ ತಂದುಕೊಟ್ಟ ಬೆಚ್ಚನೆ ಕಲಗಚ್ಚು ಕುಡಿದು ಮರುಮಾತಾಡದೆ ದುಡ್ಡುಕೊಟ್ಟು ಹೊರಟೆವು. ಅದಕ್ಕೇ ಹೇಳೋದು—ಪರಮಾತ್ಮನ ಲೀಲೆ ಅಂತ—ನಮ್ಮ ಕೈಲಿ ಏನಿದೆ?

ಕಲ್ಲೂರು ಸೇರಿದೆವು. ಊರೊಳಗೆ ನಾವು ಹೊಕ್ಕ ಘಳಿಗೆಯಲ್ಲಿ ದೊಂಬಿಯೋ ದೊಂಬಿ. ಸುಮಾರು ಹತ್ತುಸಾವಿರ ಮಕ್ಕಳು—ನಾನು ಎಣಿಸಲಿಲ್ಲ – ಆದರೆ ಎಲ್ಲಿ ನೋಡಿದರೂ ಬಾಲವಿಲ್ಲದ....ಮಕ್ಕಳೇ ಕಂಡವು— ಯುದ್ಧಕ್ಕೆ ಇಳಿದಹಾಗಿತ್ತು. ನಮಗೆ—ವಯಸ್ಕರು ಯುದ್ಧ ಹೂಡುವುದು ಸರ್ವೇಸಾಧಾರಣವಾಗಿದೆ. ಆದರೆ ಮಕ್ಕಳು ಈ ರೀತಿ ದೊಂಬಿ ಸೇರಬೇಕಾದರೆ ಏನೋ ಕಾರಣವಿರಬೇಕೆಂದು....ಯಥಾಪ್ರಕಾರ ವಾಹನದಿಂದಿಳಿದು ವಿಚಾರಿಸಿದೆ. ಮಕ್ಕಳ ದಿನಾಚರಣೆ! "ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು! ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು!! ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು!!!" ಈ ಆವೇಶದ ಮಾತುಗಳು ನನ್ನ ಕಿವಿಗೆ ಬಿತ್ತು.

ನಾನು ರಾಜ ಚಂದಿ—ವಾಹನಗಳನ್ನು ಬಿಟ್ಟು ದೊಂಬಿಯಲ್ಲಿ ನುಗ್ಗಿದೆವು.

"ಮಕ್ಕಳಿರಾ— ನೀವೆಲ್ಲರೂ ನಮ್ಮ ಪೂಜ್ಯ ನೆಹರು ಅವರ ಹಾಗೆ ಆಗಬೇಕು. ನಮ್ಮ ಭಾರತ ಮಾತೆಯನ್ನು ಮುಂದೆ ನೀವೇ ಆಳುವವರು "

"ನೆಹರು ಅವರು ತಮ್ಮ ವಿದ್ಯಾಭ್ಯಾಸವನ್ನು ಇಂಗ್ಲೆಂಡಿನಲ್ಲಿ ಮುಗಿಸಿ ನಮ್ಮ ಭಾರತಕ್ಕೆ ಬಂದು ಜೈಲು ವಾಸ ಅನುಭವಿಸಿ ನಮ್ಮ ದೇಶಕ್ಕೆ ಸ್ವತಂತ್ರಗಳಿಸಿದರು. ಮಕ್ಕಳಿರಾ ನೀವೆಲ್ಲರೂ ಅವರನ್ನೇ ಅನುಸರಿಸಬೇಕು "

"ನೆಹರೂಕೀ ಜೈ! ಗಾಂಧೀಕೀ ಜೈ!! ಜೈ ಹಿಂದ್!!!...."

ಈ ಭಾಷಣಗಳೊಂದೂ ಮಕ್ಕಳ ಕಿವಿಗೆ ಬಿದ್ದಹಾಗಿರಲಿಲ್ಲ. ಯಾವ ಭಾಷಣವೂ ಯಾರ ಕಿವಿಗೂ ಎಂದೂ ಬಿದ್ದಿಲ್ಲ. ನರ—ಕೃಷ್ಣನ ಬಾಯಿಂದ ಗೀತಾ ಭಾಷಣ ಕೇಳಿ ಸುಸ್ತಾಗಿ—ಅವತ್ತಿನಿಂದ ಭಾಷಣ ಕೇಳೋದು ಬಿಟ್ಟ. ಹಾಗೂ—"ವರ್ಷ ವೆಲ್ಲಾ ಪೋಲೀ ತಿರುಗಿದ ಮಕ್ಕಳನ್ನು ವರ್ಷಕ್ಕೊಮ್ಮೆ ಹತೋಟಿಗೆ ತರಲು ಸಾಧ್ಯವೇ ಇಲ್ಲ"– ಅಂದ ಚಂದಿ.

"ನಮ್ಮ ದೇಶದಲ್ಲಿ ಇದೊಂದು ಜಾಡ್ಯ—ಆಚರಣೆ ಜಾಡ್ಯ .." ಅಂದ ರಾಜ.

"ಹೌದಯ್ಯಾ—ಯಾವುದೂ ಆಚರಣೆಯಿಲ್ಲದೆ ಪ್ರಕಟವಾಗೋದು ಹೇಗೆ" ಅಂತ ಕೇಳಿದ ಚಂದಿ.

"????" ಅಂದೆ ನಾನು.

ನನಗೆ ಚಂದಿಯ ಸಮಸ್ಯೆ ಅರ್ಥವಾಗಲಿಲ್ಲ. ಮೊದಲು ಆಚರಣೆಯೋ—ಪ್ರಕಟಣೆಯೋ?

"ಚಂದೀ—ನೀ ಹೇಳೋ ಮಾತು....

"ನೀ ಸುಮ್ಮನಿರಯ್ಯ-ನಿನ್ಯಾವಾಗಲೂ ರಾಜನ ಪರವೇ ವಹಿಸಿ ಮಾತಾಡ್ತಿ!"

ನಾ ಸುಮ್ಮನಾದೆ.

"ಚಂದಿ—ನಾ ಹೇಳಿದ್ದರ ಅರ್ಥ ಕೇಳಯ್ಯಾ—ಯಾವುದಾದರೊಂದು ನೆಪ ಹೂಡಿ ಈ ರೀತಿ ಪ್ರತಿ ದಿನ ಉತ್ಸವಗಳನ್ನ ಮಾಡ್ತಾ ಇದ್ದರೆ—ಇನ್ನು ಆಚರಣೆಗೆ ತರುಕ್ಕೆ ಸಮಯ ಎಲ್ಲಿ ಹುಡುಕೋದು?"

"ಅಷ್ಟೇ ತಾನೇ? ನಾ ಹೇಳೋದು ಕೇಳು—ಈ ರೀತಿ ನಮ್ಮ ದೇಶದ ಸಮಸ್ಯೆ ಗಳ ಬಗ್ಗೆ ಉತ್ಸವಗಳನ್ನ ಮಾಡಿ ಜನರಿಗೆ ತಿಳುವಳಿಕೆ ಕೊಡದೇ ಹೋದರೆ ಇಂಥಾ ಸಮಸ್ಯೆ ಇದೇಂತ ಜನರಿಗೆ ಹೇಗಯ್ಯಾ ತಿಳಿಯೋದು?"

ನನಗೆ ಚಂದಿಯ ವಾದ ಸರಿಯೆಂದು ತೋರಿತು.

"ರಾಜ—ಚಂದಿಯ ಮಾತು ಸರೀಂತ ಕಾಣತ್ತೆ. ಯಾಕೇಂದ್ರೆ...."

"ನೀ ಸುಮ್ಮನಿರಯ್ಯ. ನೀನ್ಯಾವಾಗಲೂ ಚಂದಿಯ ಪರವೇ ವಹಿಸಿ ಮಾತಾಡ್ತೀ!"

ನಾ ಸುಮ್ಮನಾದೆ.

ಪುನಃ ನಾನು ಅವರಿಬ್ಬರ ಸಂಭಾಷಣೆಯ ಕಡೆ ಗಮನ ಕೊಡಲಿಲ್ಲ. ಆದರೂ ಅವರ ಮಾತುಗಳು—ನನಗೆ ಯೋಚನೆಗೆ ಕಾರಣವಾದವು. ನಿಜಕ್ಕೂ ನಮ್ಮಲ್ಲಿ ಉತ್ಸವಗಳು—ಆಚರಣೆಗಿಂತ ಜಾಸ್ತಿ. ನಾನು ನೋಡಿದ ಒಂದೂರಿನಲ್ಲಿ "ವನ ಮಹೋತ್ಸವ" ಮಾಡಿದಾಗ ಗಿಡಮರಗಳನ್ನೆಲ್ಲಾ ಕಿತ್ತು ಬೋಳುಮಾಡಿ ಚಪ್ಪರ ತೋರಣಗಳನ್ನು ಹಾಕಿದ್ದರು. ವನಮಹೋತ್ಸವ ನಡೆಯಿಸದೆ ಹಾಗೇ ಇದ್ದಿದ್ದರೆ—ಗಿಡಮರಗಳು ಅಂದವಾಗಿರುತ್ತಿದ್ದವು. ಯಾವುದೂ ಉತ್ಸವಗಳಿಲ್ಲದೆ—ಆಡಂಬರವಿಲ್ಲದೆ—ಗಾಂಧಿಯವರು ಪ್ರತಿಯೊಬ್ಬನ ಮನಸ್ಸಿನಲ್ಲಿಯೂ ಹೊಕ್ಕಿದ್ದರು. ಅವರು ಒಂದು ಹಿಡಿ ಉಪ್ಪಿಗಾಗಿ ಡಂಡಿಗೆ ಹೋದಾಗ—ಅದರಿಂದ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಾರದೆಂದು ನಮಗೆ ತಿಳಿದಿದ್ದರೂ—ನಾವೆಲ್ಲ ಕೆರಳಿದ್ದೆವು. ಈಗ—ಇಷ್ಟು ಉತ್ಸವಗಳು—ಇಷ್ಟು ಆಡಂಬರವಿದ್ದೂ ಏಕೆ ನಮಗೆ ಕುತೂಹಲವಿಲ್ಲ? ಜನರಿಗೆ ಸ್ವಾತಂತ್ರ್ಯ ನೆತ್ತಿಗೆ ಹತ್ತಿದೆಯೇ? ಕುದುರೆಯ ಮುಂದೆ ಗಾಡಿ ಕಟ್ಟುತ್ತಿದೇವೆಯೆ?....

"ಲೋ ಗೂಬೆ—ಏನೋ ಅದು ಮೆಲುಕು ಹಾಕ್ತಾ ಇದ್ದಿ?" ಅಂದ ಚಂದಿ.

—ತಿರುಗಿದೆ.

"ನೋಡೋ — ರಾಜ ಹೇಳ್ತಾನೆ — ನಮ್ಮ ಶಾಲೆಗಳನ್ನೆಲ್ಲಾ ಪಾದ್ರಿಗಳಿಗೆ ವಹಿಸಿಕೊಟ್ಟುಬಿಟ್ಟರೆ — ನಮ್ಮ ಮಕ್ಕಳಿಗೆ ಒಳ್ಳೆ ನಡತೆ, ವಿದ್ಯೆ, ಆರೋಗ್ಯ—ತಾವಾಗಿಯೇ ಬರುತ್ವೆ ಅಂತಾನೆ."

"ಮೊದಲು ಆ ರೀತಿ ಇತ್ತು. ಆದರೆ — ಈಗ ಹೇಗೋ?" ಅಂದೆ.

"ಅಥವಾ ವರ್ಷಕ್ಕೊಮ್ಮೆ ಈ ರೀತಿ — ಯಾರೂ ಕೇಳದ ಭಾಷಣಗಳನ್ನು ಮಾಡೋದು ನಿಲ್ಲಿಸಿ — 'ಪ್ರತಿದಿನ ಹಲ್ಲುಜ್ಜಿ ಸ್ನಾನಮಾಡಿ ಒಗೆದ ಬಟ್ಟೆಹಾಕಿಕೊಂಡು ಕಿಸೆಯಲ್ಲಿ ಒಂದು ಒಗೆದ ಕರ್ಚೀಫ್ ಇಟ್ಟುಕೊಂಡು ಕಾಲಕ್ಕೆ ಸರಿಯಾಗಿ ಶಾಲೆಗೆ ಬರೋ ಮಕ್ಕಳಿಗೂ, ಆ ಮಕ್ಕಳನ್ನು ಹಾಗಿಟ್ಟರೋ ತಾಯಿಂದರಿಗೂ ಬಹುಮಾನಗಳನ್ನಿಟ್ಟರೆ' — ಎಷ್ಟೋ ವಾಸಿ — ಅಲ್ಲವೆ?" ಅಂದ ರಾಜ.

"ಆದರೂ ಆಗಬಹುದು" ಅಂದೆ.

ಕಲ್ಲೂರು ದಿನಾಚರಣೆ ಮುಕ್ತಾಯವಾಗಿ ಭಾಷಣಗಳು ಮುಗಿದು — ಧಾಂಧಲೆ ಇಮ್ಮಡಿಯಾಗಿತ್ತು. ನಾವು ಮಲಗಿಸಿದ್ದ ವಾಹನಗಳು ನೆಲಸಮವಾದಹಾಗಿತ್ತು. ನೋಡಲು ಆ ಕಡೆ ನುಗ್ಗಿದೆ. ನಮ್ಮ ವಾಹನಗಳು ಮುರಿದರೆ ನಮ್ಮ ಪಾಡು—ಲೈಕಾ ಪಾಡು!

— ಶೇಷ.

——o——

ಪ್ರಾಣೇಶ ಪ್ರಸಂಗ

ಚಂದ್ರ ಮರಿ

ಅಕ್ಟೋಬರ್ ತಿಂಗಳಲ್ಲಿ ಕೃಶ್ಚೇವರ ಮರಿ ಚಂದ್ರ ಆಕಾಶದಲ್ಲಿ ಹಾರಿ ಬಂದಾಗಲೇ ಪ್ರಾಣೇಶನ ಚಂದ್ರಮರಿ ನರ್ಸಿಂಗ್ ಹೋಮಿನಲ್ಲಿ ಬೆಳಕು ಕಂಡ ಎಂಬ ಸುದ್ದಿಯನ್ನು better late than never ಅಂತ ಈಗ ಪ್ರಸ್ತಾಪಿಸಿದ್ದೇನೆ.

ಮರಿ ಚಂದ್ರನನ್ನು ಆಕಾಶದಲ್ಲಿ ತೂರಿಬಿಡುವ ಸಂದರ್ಭದಲ್ಲಿ ರಷ್ಯದ ವಿಜ್ಞಾನಿಗಳು ಉದ್ವೇಗದಿಂದ ಚಡಪಡಿಸಿದರೋ ಏನೋ ನಮಗೆ ತಿಳಿಯದು. ಆದರೆ, ಪ್ರಾಣೇಶನ ಚಂದ್ರ ಮರಿ ಪ್ರತ್ಯಕ್ಷನಾಗುವ ಹೊತ್ತಿಗೆ ಈತ ಉದ್ವೇಗದಿಂದ ಕಾತರದಿಂದ ಪಡಪಡಿಸಿ ಹತ ಹತ ಆಗಿಬಿಟ್ಟಿದ್ದಾನೆ. ಈ ಮೂರು ತಿಂಗಳ ಅವಧಿಯಲ್ಲಿ ಪ್ರಾಣೇಶ ಕಡಿದ ಉಗುರು ಒಂದು ಮಣವಾದರೂ ಆಗಬಹುದೆಂದರೆ ಆತನ ಪರಿಸ್ಥಿತಿ ನಿಮಗೆ ಅರ್ಥವಾಗಬಹುದು.

"ಹಾಗಾದರೆ ಹೆರಿಗೆಯಾದದ್ದು ಶ್ರೀಯುತ ಪ್ರಾಣೇಶರಿಗೋ ಅವರ ಶ್ರೀಮತಿಯರಿಗೋ?" ಎಂದು ನೀವು ಕೆಣಕು ನುಡಿಯುತ್ತೀರೋ ಏನೋ....ಆದರೆ ಆಗ ಪ್ರಾಣೇಶನನ್ನು ನೋಡಬೇಕಾಗಿತ್ತು ಕಾತರ, ಕಾತರ, ಕಾತರ... ಎಷ್ಟೊಂದು ಕಾತರ ಅಂತೀರ! ಅದಕ್ಕೆ ಮೂಲ ಆತ ಹೋಗಿ ಎರಡು ತಿಂಗಳ ಹಿಂದೆ ಜೋಯಿಸರನ್ನು ಕಂಡಿದ್ದು.

ಪ್ರಾಣೇಶನಿಗೆ ಮೊದಲಿನಿಂದಲೂ ಜಾತಕ ಗೀತಕಗಳಲ್ಲಿ ನಂಬಿಕೆಯಿಲ್ಲ. ಅದಕ್ಕೆ ಸರಿಯಾಗಿ ಜಾತಕದ ಹಂಗಿಲ್ಲದೆ ಕ್ರಾಸ್‌ವರ್ಡ್ ಮಾವ ಅವನ ಕೊರಳಿಗೆ ಹೆಣ್ಣು ಕಟ್ಟಿದರು. ಆದರೆ ಈತ ಗರ್ಭಿಣಿಯನ್ನು ಕರೆದುಕೊಂಡು ಬರುವಾಗ ಆಕೆ ತನ್ನ ಜಾತಕದ ಒಂದು ಪ್ರತಿಯೊಂದನ್ನು ಏಕೆ ತಂದಳೋ ಗೊತ್ತಿಲ್ಲ; ತಂದಿದ್ದು ಮಾತ್ರವಲ್ಲದೆ ಅದನ್ನು ಜೋಯಿಸರಿಗೆ ತೋರಿಸಿ ಎಂದು ಬೇರೆ ಪೀಡಿಸಿದಳೆಂದು ಕಾಣುತ್ತದೆ ಡಾಕ್ಟರಿಣಿಯಾಗುತ್ತೇನೆ ಎಂದು ಕೊಚ್ಚಿಕೊಳ್ಳುತ್ತಿದ್ದ ಹುಡುಗಿ ಸರಿ, ಪ್ರಾಣೇಶ ಹೋಗಿ ಜಾತಕ ತೋರಿಸಿದ ಜೋಯಿಸರಿಗೆ. "ನನಗೇನೋ ಜ್ಯೋತಿಷ್ಯದಲ್ಲಿ ನಂಬಿಕೆಯಿಲ್ಲ. ಆದರೂ...." ಎಂದು ಮುಂತಾಗಿ ಪೀಠಿಕೆ ಹಾಕಿಕೊಂಡೇ ಪ್ರಾರಂಭಿಸಿದ. ಆಗ ಜೋಯಿಸರು ಕನ್ನಡಕವನ್ನು ಹಣೆಗೇರಿಸಿ "ಹಾಗಿದ್ದರೆ ತಾವು

ಏಕಂತ ಇಲ್ಲಿಗೆ ಪಾದ ಬೆಳೆಸಿದಿರಿ? ಇನ್ನು ಬಿಜಯಂಗೈಯಬಹುದು" ಎಂದು ಬಿಟ್ಟರಂತೆ. ಪ್ರಾಣೇಶ ಬೇಗನೆ ಧರೆಗಿಳಿದು ಅವರನ್ನು ಹೇಗೋ ಸಮಜಾಯಿಸ ಬೇಕಾಯಿತು. "ಇದ್ದದ್ದು ಇದ್ದಹಾಗೆ ಹೇಳುತ್ತೇನೆ. ಕೊನೆಗೆ ಆತಂಕ ಪಡ ಬಾರದು" ಎಂಬ ಎಚ್ಚರಿಕೆ ಕೊಟ್ಟುಕೊಂಡೇ ಮುನಿಸಿಳಿಯದ ಜೋಯಿಸರು ಇದ್ದಿದ್ದನ್ನು (?) ಇದ್ದಹಾಗೆಯೇ (?) ಹೇಳಿದರು. ಮನೆಗೆ ಬಂದಾಗ ಪ್ರಾಣೇಶ ಬಹಳ ಸಪ್ಪಗಾಗಿದ್ದ. ಏನು ಸಮಾಚಾರ ಅಂತ ಕೇಳಿದ್ದಕ್ಕೆ "ಏನೋ ಸಂಧಿಯಿದೆ ಯಂತೆ ಆಕೆಯ ಜಾತಕದಲ್ಲಿ. ಒಟ್ಟು ಗಂಡಾಂತರದ ಕಾಲವಂತೆ" ಎಂದು ಗಾಬರಿ ಗೊಂಡು ಜೋಯಿಸರನ್ನು ಕಂಡ ವೃತ್ತಾಂತವನ್ನೆಲ್ಲ ಹೇಳಿದ.

"ಸುಮ್ಮನಿರಯ್ಯ. ಸದ್ಯ ಆಕೆ ಹತ್ತಿರ ಇಲ್ಲಸಲ್ಲದ ಕಂತೆಯನ್ನೆಲ್ಲ ಬಿಚ್ಚಿ ಗಾಬರಿಪಡಿಸಬೇಡ. ರಾದ್ಧಾಂತವಾದೀತು. ಆಗೋದೇನಿಲ್ಲ. ಕೇಳಿದರೆ ಎಲ್ಲಾ ಚೆನ್ನಾಗಿದೆ ಅಂದುಬಿಡು" ಎಂದೆ, ಆಕೆ ಕೇಳಿದಾಗಲೇನೋ ಪ್ರಾಣೇಶ ಹಾಗೇ ಸುಳ್ಳು ಹೊಡೆದ. ಆಕೆ ನೆಮ್ಮದಿಯಿಂದ ಆ ಮೊದಲೇ ಹೊಲಿದಿಟ್ಟ ಕುಲಾವಿಗಳನ್ನು ತೆಗೆದುನೋಡುತ್ತ, ಹಿಂದೀ ಕಾದಂಬರಿಗಳನ್ನು ಓದುತ್ತ, ಗೆಳತಿಯರೊಡನೆ ಹರಟುತ್ತ, ಸುಖವಾಗಿದ್ದಳು. ಆದರೆ, ಈತನಿಗೋ ಎಲ್ಲಿಲ್ಲದ ತಲೆಬಿಸಿ. ಆಕೆ ಸುಮ್ಮನೆ ಕುಳಿತಿದ್ದರೆ ಹೋಗಿ "ಈಗ ಹೇಗಿದ್ದೀಯ?" ಎಂದು ಕೇಳುವ, ತನ್ನೊಡಲಲ್ಲಿ ಭೀತಿ ತುಂಬಿಕೊಂಡು. "ಗೌರಜ್ಜಿ ಕೊಟ್ಟರೆ ಇನ್ನೂ ಒಂದು ಲೋಟ ಕಾಫಿ ಕುಡಿಯುವ ಹಾಗಿದೇನೆ" ಎಂದು ಆಕೆ ಹೇಳಿದರೆ ಪ್ರಾಣೇಶ ರೇಗಲೂ ಆಗದೆ ನಗಲೂ ಆಗದೆ ತಲೆ ಕೆರೆದುಕೊಂಡು ಅಲ್ಲಿಂದ ಕಂಬಿ ಕೀಳುವ.

ಏನೇನು ಮುಂಜಾಗ್ರತೆ ಅಗತ್ಯವೆಂದು ಪ್ರಾಣೇಶ ಗೌರತ್ತೆಯನ್ನು ನೂರು ಸಲ ಪ್ರಶ್ನಿಸಿದ. ಡಾ|| ಕಿಟ್ಟೂರಯ್ಯ ಬೇಕಾದಷ್ಟು ಅಭಯ ವಚನ ನೀಡಿದರು. ಆದರೂ ಈತನಿಗೆ ಭರವಸೆಯಿಲ್ಲ. ಎದುರಿಗೆ ಮಾತ್ರ "ನನಗೇನೂ worry ಇಲ್ಲ ಆ ಕುರಿತು. ದೇವರಿದ್ದಾನೆ" ಎನ್ನುವ. ಆದರೆ ಹಗಲಿರುಳೂ worry ಮಾಡುತ್ತ ಕೂಡುವ. ಕಂಡ ಕಂಡ ಡಾಕ್ಟರೊಡನೆ ಹೆರಿಗೆ ವಿಚಾರ ವಿವರ ಕೇಳುವ. ಮಾತ್ರ ಮಾತ್ರವಲ್ಲದೆ ಅಮೆರಿಕದ ಯಾರೋ specialistಗೆ ಕೂಡ ಬರೆದಿದ್ದನೋ ಅಂತ ಅಂತ ಸಂಶಯುವಿದೆ.

ತಾಯಿಯಾಗಲಿರುವ ಮಹಿಳೆಯ ಕುರಿತು ನೂರು ಮಂದಿ ಬರೆದಿದ್ದಾರೆ. ಪ್ರಾಣೇಶ ಅವನ್ನೆಲ್ಲ ತರಿಸಿ ಓದಿ ಬಸುರಿ ಹೆಂಗಸನ್ನು ತನ್ನ ಸಲಹೆಗಳಿಂದ ಪೀಡಿಸಿದ. ಸದ್ಯ ಆಕೆ ಅವನ್ನೆಲ್ಲ 'ಒಂದು ಚಿಮುಟಿ ಉಪ್ಪು ಹಾಕಿ' ಅನ್ನುತ್ತಾರಲ್ಲ—ಹಾಗೆ ತೆಗೆದುಕೊಂಡಿದ್ದರಿಂದ ಒಳ್ಳೆಯದಾಯಿತು. ತಂದೆಯಾಗಲಿರುವ ಗಂಡಸಿನ ಕುರಿತು ಯಾರೂ ಏನನ್ನೂ ಬರೆಯದಿದ್ದೇ ಕೊರತೆ. ಜೋಯಿಸರು ಬೇರೆ ಈತನಿಗೆ ಚಳಿ ಹುಟ್ಟಿಸಿಬಿಟ್ಟಿದ್ದರು. ಅದಕ್ಕೊಂದು ಉಪಾಯ ಹೂಡಲು ನೋಡಿದೆ. ಬಹಳ ಕಷ್ಟಪಟ್ಟು ಪ್ರಾಣೇಶನ ಜಾತಕವನ್ನು ಹುಡುಕಿ ತೆಗೆದು ನಾನೇ ಜೋಯಿಸರಿಗೆ

ತೋರಿಸಿದಂತೆ ಮಾಡಿ "ನಿನ್ನಲ್ಲಿ ಶುಭ ಲಕ್ಷಣಗಳೇ ಇವೆ ಕಣೋ; ಗಾಬರಿಯೇನೂ ಇಲ್ಲ" ಎಂದೆ. ಆದರೆ ಈ ಅಶುಭ ವೀಕ್ಷಣಾ ಶಿಖಾಮಣಿ ಒಪ್ಪಬೇಕಲ್ಲ! "ಜೋಯಿಸರು ಹೇಳಿದರೆಂದಲ್ಲವಯ್ಯ. ಸಹಜವಾಗಿ anxiety ಇರುತ್ತೆ. ನಿನಗೇನು ಗೊತ್ತು ?"—ಎಂದು ಬೇರೆ ತೊಡಗಿದ.

ಹೌದು ಹೌದೆಂದು ನಾನು ಸೋಲೊಪ್ಪಿಕೊಳ್ಳಬೇಕಾಯಿತು. ಸರಿ. ಕಿಟ್ಟೊ ರಯ್ಯನ ಸಲಹೆ ಮೇರೆಗೆ ಒಂದು ದಿನ ಸರಳಮ್ಮ ಮೆಟರ್ನಿಟಿ ಹೋಂ ಸೇರಿದಳು. ಆ ದಿನವಂತೂ ಪ್ರಾಣೇಶನ ಗಡಿಬಿಡಿ ಹೇಳಿ ತೀರದು. ಈತ ಮೆಟರ್ನಿಟಿ ಹೋಮ್ ನಲ್ಲಿ ಯಥಾ ಪ್ರಕಾರ ಅವರಿವರೊಡನೆ ಪ್ರಶ್ನೆಗಳ ಸುರಿಮಳೆ ಸುರಿಸಿದಾಗ, ಅಲ್ಲಿಯ ಒಬ್ಬಳು ಧಡೂತಿ ನರಸಮ್ಮ ಕೊಂಚ ತಾಳ್ಮೆಗೆಟ್ಟು "ನಿಮಗೆ ಯಾತಕ್ಕರೀ ಅದೆಲ್ಲ, ತೆಪ್ಪಗಿರಿ. ಮಗು ಹುಟ್ಟಿದಾಗ ಅಪ್ಪನಿಗೇನೂ ಕೇಡಾದ್ದನ್ನು ಕಾಣೆ. ತೆಪ್ಪಗಿರಿ ನೀವು" ಎಂದು ಗದರಿಸಿದಳು. ಈತ ತೆಪ್ಪಗೆ ಹಲ್ಲು ಕಡಿದು ಮನೆಗೆ ಬಂದು "ತೆಪ್ಪಗಿರ ಬೇಕಂತೆ" ಎಂದು ಹಲವು ಸಲ ಹೇಳಿಕೊಂಡ "ಇಂದಿನ ಜಗತ್ತಿನ ಕ್ಷುಬ್ಧ ಪರಿಸ್ಥಿತಿ" ಎಂಬ ಸಂಪಾದಕೀಯ ಬರೆದ ನವದುಂದುಭಿಗೆ. ಹೌದು ಪರಿಸ್ಥಿತಿ ಕ್ಷುಬ್ದವೇ ಆಗಿತ್ತು!

ಸರಿ. ಅವತ್ತಿನಿಂದ ಪ್ರಾಣೇಶ ಮುಖಕ್ಷೌರ ನಿಲ್ಲಿಸಿದ. ಹುಲುಸಾದ ಬೆಳೆ ಬೆಳೆಯಿತು. (ಸ್ವರ್ಗದಲ್ಲಿರುವ ಆಚಾರವಂತ ಅಪ್ಪನಿಗೆ ತೃಪ್ತಿಯಾಗಿರಬೇಕು) ಜಗತ್ತಿನ ಭಾರವನ್ನೆಲ್ಲ ಹೊತ್ತ ಆದಿಶೇಷನಿಗಿಂತಲೂ ಹೆಚ್ಚೆಂಬಂತೆ ಮೂತಿ ಮಾಡಿ ಕೊಂಡು ಓಡಾಡಿದ. "ಹೆಸರೇನಂತ ನಿರ್ಧರಿಸಿದೀರಪ್ಪ ?" ಎಂದು ಮುಂತಾಗಿ ಪ್ರಶ್ನಿಸಿ ಬಿಗಡಾಯಿಸಿದ ವಾತಾವರಣವನ್ನು ಸಡಿಲಿಸಲು ಯತ್ನಿಸಿದರೆ, ಪ್ರಾಣಿ "ಸದ್ಯ ಅನಾಹುತವೇನೂ ಆಗದಿದ್ದರೆ ಸಾಕು. ಆಮೇಲಲ್ಲವೆ ಹೆಸರು ಗಿಸರು" ಎಂದು ಗೊಣಗಿದಾಗ 'ಧತ್' ಎನಿಸಿತು ನನಗೆ. ಆ ಜೋಯಿಸ ಏನೇನು ಹೇಳಿದ್ದನೋ! ಆದರೂ ಈ ಪ್ರಾಣಿ ಇಷ್ಟೊಂದು funky ಆಗಬೇಕೆ ? ಅಂತೂ 'paternity pains' ಎಂದರೆ ಒಂದು ಫಜೀತಿ ಎನಿಸಿತು. ಬಾಗಿಲು ಸದ್ದಾದರೆ ಸಾಕು, ಹೊರಗೆ ಕಾರು ನಿಂತರೆ ಸಾಕು, ಫೋನು ಟ್ರಿಂ ಅಂದರೆ ಸಾಕು; ಉಗುರು ಕಚ್ಚುತ್ತಾ ಮನಸ್ಸಿ ನಲ್ಲಿ ಅನಿಷ್ಟಗಳನ್ನೇ ಲೆಕ್ಕ ಹಾಕುತ್ತಾ ಏನಾದರೂ ಮಾಡುತ್ತಿರುವ ಪ್ರಾಣಿ ಬೆಚ್ಚಿ ಬಿದ್ದು ಧಾವಿಸುವ. ಗೌರತ್ತೆ ಬೇರೆ ಹೇಳಿ ನೋಡಿದರು. "ನಿಮ್ಮ ಕಾಲವಲ್ಲ ಗೌರತ್ತೆ; ಈಗ ಎಲ್ಲ ಬದಲಾಯಿಸಿಬಿಟ್ಟಿದೆ" ಎನ್ನುವ ಈ ಭೂಪನಿಗೆ ಏನು ಹೇಳೋ ದಕ್ಕಿದೆ ? ಅಂತೂ ಸದ್ಯ ಎಲ್ಲಾ ಸುಖಮುಖವಾದರೆ ಸಾಕು ಎಂದು ನಮಗೆಲ್ಲರಿಗೂ ಅನ್ನಿಸಿತು.


ಹಾಗೂ ಹೀಗೂ ದೇವರು ನಮ್ಮ ಪ್ರಾರ್ಥನೆಯನ್ನು ನಡೆಸಿಕೊಟ್ಟ ಅನ್ನಿ.

Maternity Home ನ ಬೆಂಚಿನ ಮೇಲೆ ಕುಳಿತು, ಪ್ರಾಣೇಶ ತನ್ನ ನೂರ ಒಂದನೇ ಸಿಗರೇಟನ್ನು ಹಚ್ಚಿ, ದಿನ ಪತ್ರಿಕೆಯನ್ನು ತೆರೆದು ಕೃಶ್ಚೇವ ಮರಿ

ಚಂದ್ರನನ್ನು ಹಾರಿಸಿದ ಸಮಾಚಾರವನ್ನು ಓದುತ್ತಿರುವಾಗಲೇ ಸಿಹಿ ಸುದ್ದಿ ಬಂತು. ಪ್ರಾಣೇಶನ ಚಂದ್ರ ಮರಿಯೂ ಜಗತ್ತಿಗಿಳಿದಿದ್ದ. ಆಕಾಶದಲ್ಲಿ ಬ್ಲೀಪ್ ಬ್ಲೀಪ್ ಆದರೆ ಇಲ್ಲಿ ಉವ್ವೇ ಉವ್ವೇ ಯೋ ಎಂಥದೋ! ಸುದ್ದಿ ತಿಳಿದೊಡನೆ ಪ್ರಾಣೇಶ 'ಕಿಶೋರ ಚಂದ್ರ' ಎಂದು ನೆಗೆದ. ಹೌದು ಹೌದು ಎಂದು ಅವನನ್ನು ಭುಜ ಹಿಡಿದು ಕುಳ್ಳಿರಿಸಬೇಕಾಯಿತು.

ಪ್ರಾಣೇಶ ಸಿಹಿ ಹಂಚಿದ್ದೂ ಹಂಚಿದ್ದೇ ಆದರೆ ಜೋಯಿಸರಿಗೂ ಕಳುಹಿ ಸಯ್ಯ ಎಂದಾಗ ಉರಿದುಬಿದ್ದ. "ಆ ಮೂರ್ಖನಿಗೇ ?" ಎಂದು ಎಗರಾಡಿದ. ಸರಳಮ್ಮ ಮಾತ್ರ "ಜೋಯಿಸರು ಹೇಳಿದ ಹಾಗೆ ಎಲ್ಲಾ ಸುಖವಾಯಿತು. ಸಿಹಿ ಕೊಟ್ಟು ಆಶೀರ್ವಾದ ತೆಗೆದುಕೊಂಡು ಬನ್ನಿ. ಹಾಗೇ ಜಾತಕಾನೂ ಮಾಡಿಸಿ ಕೊಂಡು ಬನ್ನಿ ಮಗೂದು" ಎಂದು ಅಮ್ಮನಾದವಳ ಅಧಿಕಾರವಾಣಿಯಲ್ಲಿ ಅಣತಿ ಯಿತ್ತಾಗ ಪ್ರಾಣೇಶ 'ಜೀ ಹಾ' ಎನ್ನಲೇಬೇಕಾಯಿತು. ಆದರೆ, ಜೋಯಿಸರಲ್ಲಿಗೆ ತಾನು ಹೋಗದೆ ನನ್ನನ್ನು ದಬ್ಬಿದ.

—ರಾಮಿ.



ಷೂನಿಂದ ಕ್ಷೌರ

ಬೆಂಗಳೂರಿಗೆ ಮೊನ್ನೆ ನಾನು ಹೋಗಿದ್ದಾಗ, ಕಾಲಿಗೆ 'ಷೂ' ಕೊಂಡು ಕೊಳ್ಳುವ ಉದ್ದೇಶವೇ ಇರಲಿಲ್ಲ. ಆದರೂ, ನನ್ನ ಹಳೆಯ ಗೆಳೆಯ ಸೋಮಪ್ಪ ನನ್ನು ಮಾರ್ಕೆಟ್ ಚೌಕದಲ್ಲಿ ಕಂಡಾಗ, ನಾನೂ ಒಂದು ಜೊತೆ ತೆಗೆಯಬೇಕಾಗಿ ಬಂತು.

"ನೋಡು, ಮಾರಾಯ! ಎಷ್ಟು ಸೊಗಸಾಗಿದೆ .... ಇಲ್ಲೇ .... ಆ ಮೂಲೆ ಅಂಗಡೀಲಿ.... ಬಾಗಿಲು ಮುಚ್ಚುವುದರೊಳಗೆ ನೀನೂ ಒಂದು ಜೊತೆ ತಗುಲಿಸಿಕೊ! ಎಲ್ಲಿಗೆ ಹೋಗಿದ್ದೆ, ಬೆಳಗಿನಿಂದ? ನನ್ನ ಕಾಲಿಗೆ ಅವನು ಇದನ್ನ ತೊಡಿಸುತ್ತಾ ಇದ್ದಾಗ, ನನಗೆ ನಿನ್ನ ನೆನಪು ಬಂತು....ಬಹಳ ಅಗ್ಗವಾಗಿ ಕೊಡುತ್ತಾ ಇದಾನೆ.... ಹನ್ನೆರಡೂವರೆ ರೂಪಾಯಿ, ಅಷ್ಟೆ.... ಬಾ! ನಿನ್ನ ಹರಕಲು ಷೂನ ಅಲ್ಲೇ ಬಿಸಾಕ ಬಹುದು ...ಹೊಸದನ್ನ ಹಾಕಿಕೊಂಡೇ ಸಿನಿಮಾ ಎರಡನೆಯ ಷೋಗೆ ದರ್ಶನ ಕೊಡೋಣ" ಎಂದು ಒತ್ತಾಯ ಮಾಡಿದ.

ಹೌದು! ತೀರಾ ಹರಕಲಾಗಿಯೇನೋ ಇತ್ತು.... ಅದರ ಹೊಟ್ಟೆಯಲ್ಲಿದ್ದ ರೊಟ್ಟೆಲ್ಲ ಹೊರಕ್ಕೆ ಬಂದಿತ್ತು....ಹಿಮ್ಮಡಿ ಸಂಪೂರ್ಣ ಸವೆದಿತ್ತು....ಮುಮ್ಮಡಿ ತಳ ವೆಲ್ಲ ತೂತುಬಿದ್ದು, ಆಗಾಗ ಗಾಜಿನ ಚೂರುಗಳು ಚುಚ್ಚುತ್ತಿದ್ದುವು....

"ಸರಿ! ಬಾರೊ!" ಎಂದು ಹೇಳಿ, ಸೋಮಪ್ಪನ ಸಂಗಡ, ಮೂಲೆ ಅಂಗಡಿಗೆ ನುಗ್ಗಿದೆ ...ನನ್ನ ಹರಕಲು ಷೂ ನೋಡುತ್ತಲೂ, ಅವನು ನನ್ನ ಗಮನವನ್ನು ಅಲ್ಲಿ ತೂಗುತ್ತಿದ್ದ ಒಂದು ಬೋರ್ಡಿನ ಕಡೆ ಸೆಳೆದ...."ಸಾಲ ದೊರೆಯುವುದಿಲ್ಲ" ಎಂದು ಅದರ ಮೇಲೆ ಬರೆದಿತ್ತು.

ಹರಕಲು ಷೂಗಳನ್ನು ಕಿತ್ತು, ಅದಕ್ಕಿಂತ ಹರಕಲಾಗಿದ್ದ ಕಾಲು ಚೀಲವನ್ನು ಕಂಡು ಅಸಹ್ಯ ಸೂಚಿಸಿ, ಆತ .... ನಿಮ್ಮ ಕಾಲು 9ನೇ ನಂಬರ್ .... ಇಗೊ! ಸೊಗಸಾದದ್ದು ಒಂದು ಜೊತೆ, ಅಂತ ಬ್ರೌನ್ ಷೂ ತೋರಿಸಿದ.... ಕಾಲಿಗೆ ತೂರಿಸಿದ.

ನನಗೇಕೋ, ಸುಖ ಕಾಣಿಸಲಿಲ್ಲ....ಸೋಮಪ್ಪನ ಷೂ, ಕರೀದು! ಕರೀದರ ಸ್ಟಾಕ್ ಮುಗಿದು ಹೋಗಿದೆಯಂತೆ....ಬ್ರೌನೇ ಇರೋದಂತೆ....ನಾನು ಸ್ಯಾನಿಟರಿ ಇನ್ಸ್‌ಪೆಕ್ಟರು ಹುದ್ದೆಯವ! ಕೆಸರು ತುಳಿಯದೆ ಇರಲಾರೆ! ಕರೀ ಷೂವಾದರೆ, ಕೆಸರಿನ ಬಣ್ಣವನ್ನ ನುಂಗೀತು, ಎಂಬ ಆಸೆ ನನಗೆ!

ಒಂಭತ್ತು, ನನ್ನ ಸೈಜು ಅಂದಾಗ, ನಾನು ಬೆಚ್ಚಿಬಿದ್ದೆ; ಬಿಚ್ಚಿಬಿಡೋಣ ವೆನಿಸಿತು. ಒಂಭತ್ತು ? ಅಲ್ರಿ !....ಒಂಭತ್ತೂವರೆ, ರೀ, ಅಂದೆ .... ನಾನು,— ಅಂಗಾಲು ಹಿಂಗಾಲು ಕೊಂಚ ಉರಿ ಪ್ರಾರಂಭವಾಗಿತ್ತು, ಅಷ್ಟರಲ್ಲಿ....

ಆದರೆ, ಸೋಮಪ್ಪ ಬಿಡಲಿಲ್ಲ ..."ಲೋ! ಧಡಿಯಾ!" ಅಂದ....ಅವನೂ ಸ್ಯಾನಿಟರಿ ಇಲಾಖೆಯೇ! ನಮ್ಮ ಇಲಾಖೆಯ ನೌಕರರ ಕಾನ್ಫರೆನ್ಸಿಗಾಗಿಯೇ ನಾವು ಬೆಂಗಳೂರಿಗೆ ಹೋಗಿದ್ದದ್ದು. ಸಂಬಳ ಸಾಲದು, ಮುಷ್ಕರ ಹೂಡಬೇಕೆ, ಅಥವ ಉಪವಾಸವೇ ಸಾಕೆ, ಅಂತ ನಿರ್ಧರಿಸುವುದಕ್ಕೆ.

"ಲೋ, ಧಡಿಯಾ! ನಾನೂ ನೀನೂ ಹಾಸ್ಟಲಲ್ಲಿದ್ದಾಗ, ನಿನ್ನ ಷೂನ ನಾನೂ, ನನ್ನ ಷೂನ ನೀನೂ, ಅದಲು ಬದಲು ಮಾಡುತ್ತಿರಲಿಲ್ಲವೇನೋ ? ನಿನ್ನದೂ ನನ್ನ ಹಾಗೆಯೇ ಒಂಭತ್ತೇ" ಅಂದ.

ಇನ್ನಿದರ ಮೇಲೆ, ಅಪೀಲುಂಟೆ ? ಕಾಸು ತೆತ್ತು, ರಶೀತಿ ಪಡೆಯದೆ, ಸಿನಿಮಾಗೆ ಹೋದೆವು ...ಅಷ್ಟರಲ್ಲೇ, ನನ್ನ ಕಾಲಿನ ಉರಿ ವಿಪರೀತವಾಯಿತು. "ಸೋಮಪ್ಪ ನಿಗೆ ಹೇಳಿದರೆ, ರೇಗುತ್ತಾನೆ; ಅವನಿಗೇನೂ ಬಾಧೆಯಾದ ಹಾಗೆ ಕಾಣೆನಲ್ಲಾ.... ಅವನದು ಒಂಭತ್ತಾದರೆ, ನನ್ನ ಒಂಭತ್ತೇಕೆ ನನಗೆ ಈ ರೀತಿ ಬಾಧೆ ಕೊಡುತ್ತಾ ಇದೆ" — ಅಂತ ಯೋಚಿಸಿದೆ. ಕತ್ತಲಲ್ಲೇ ಅವನಿಗೆ ಪತ್ತೆಯಾಗದೆ, ಷೂಗಳನ್ನು ಬಿಚ್ಚಿ, ಅಂಗಾಲು ಹಿಂಗಾಲು ಉಜ್ಜಿ ಕೊಂಚ ಆರಾಮವಾಗಿ ಕೂತೆ. ಅಷ್ಟರಲ್ಲೇ ಸೋಮಪ್ಪ, ಲೋ! ಹತ್ತೂವರೆಗೆ ಮೈಸೂರು ಗಾಡಿ, ಹೊರಟುಬಿಡೋಣ, ಥೂ, ಇದೆಂಥ ಸಿನಿಮ, ಕನ್ನಡ ಅಂತ ಬಂದರೆ ಹಾಡೆಲ್ಲ ಹಾಳು ಹಿಂದಿಯ ಇಮಿಟೇಷನ್ ಇದಕ್ಕಿಂತ ಅಪ್ಪಟ ಹಿಂದೀಗೇ ಹೋಗಬಹುದಾಗಿತ್ತಲ್ಲೋ, ಎಂದ....ಎದ್ದ.

ತಾಳೋ, ಐದು ನಿಮಿಷ, ಈಕೆ ಆತ್ಮಹತ್ಯೆ ಮಾಡಿಕೊಂಡಮೇಲೆ ಹಾಯಾಗಿ ಹೊರಡೋಣ, ಅಂದೆ, ನಾನು, .. ಕಾಲಿಗೆ ಮತ್ತೆ ಷೂ ತಗುಲಿಸಿಕೊಳ್ಳಬೇಕಲ್ಲಾ, ಅದಕ್ಕಾಗಿ ವ್ಯವಧಾನ ಸಿಗಲಿ, ಅಂತ.

ಅದೂ ಆಯಿತು! ಆಕೆ ಗತೀನೂ ಪೂರೈಸಿತು. ನಾವು ಎದ್ದೆವು. ಸ್ಟೇಷನಿಗೆ ಹೋಗಲು ಜಟಕಾನೇ ಬೇಕಾಯಿತು. ಏಕೆಂದರೆ ನನಗಂತೂ, ಹಾಳು ಷೂನಿಂದಾಗಿ ಒಂದು ಹೆಜ್ಜೆಕೂಡ ಮುಂದಿಡಲು ಸಾಧ್ಯವಾಗಲಿಲ್ಲ.

ಪ್ಲಾಟ್‌ಫಾರಂನಲ್ಲಿ, ಆ ಬೆಳಕಿನಲ್ಲಿ ನೋಡುತ್ತೇನೆ .. ಸೋಮಪ್ಪನೂ ಕೊಂಚ ಕುಂಟುತ್ತಾ ಇದ್ದ .. ಅವನ ಕಾಲು ನೋಡಿದರೆ, ಒಂದು ಕಾಲಿಗೆ ಕರೀ ಒಂದು ಕಾಲಿಗೆ ಬ್ರೌನ್!....ನಕ್ಕು ನಕ್ಕು ಸಾಕಾಯಿತು! "ನಿನ್ನ ಕಾಲು ನೋಡಿಕೊ" ಅಂದ, ಅವನು! ಹೌದು! ಆಶ್ಚರ್ಯ!....ನನ್ನದೂ ಹಾಗೇನೇ....ಒಂದು ಕಾಲಿನದು


ಕರೀ! ಒಂದು ಕಾಲಿನದು ಬ್ರೌನ್! “ಇದ್ಯಾಕೊ, ಹೀಗಾಯಿತು! ನನಗೆ ಅವನು ಅಂಗಡೀಲಿ ಬ್ರೌನೇ ಕೊಟ್ಟ! ಅದನ್ನೇ ತಗುಲಿಸಿದ....” ಅಂತ ನಾನು ಪ್ರಾರಂಭ ಮಾಡಿದೆ....ಆದರೆ, ಅಷ್ಟರೊಳಗೆ, ಗುಟ್ಟು ತಿಳಿಯಿತು.

ಸೋಮಪ್ಪನೂ ಉರಿ ತಾಳಲಾರದೆ, ಸಿನಿಮಾ ಕತ್ತಲಲ್ಲಿ, ನನಗೆ ತಿಳಿಯದೆ, ತನ್ನ ಒಂಭತ್ತನ್ನು ಬಿಚ್ಚಿ ಬೆಂಚಿನ ಕೆಳಗೆ ತೂರಿಸಿ, ಆರಾಮವಾಗಿದ್ದ!

ಇಬ್ಬರೂ ಚೆನ್ನಾಗಿ ನಕ್ಕೆವು....ಕರೀದು, ಬ್ರೌನ್, ಎರಡನ್ನೂ ಬಿಚ್ಚಿ, ಬೆಡ್ಡಿಂಗಿಗೆ ಸೇರಿಸಿ, ಪ್ಲಾಟ್‌ಫಾರಂ ಉದ್ದಕ್ಕೂ, ಹಾಡುತ್ತ ಹಾಯಾಗಿ ನಡೆದೆವು! ಆಗಿನ ಆನಂದದಲ್ಲಿ, ಒಬ್ಬೊಬ್ಬರಿಗೂ ಆ ಒಂಭತ್ತರ ಷೂನಿಂದಾದ ಕ್ಷೌರದ ನೆನಪೇ ಇರಲಿಲ್ಲ.

—ಪಾಟೂಳಿ.

—:o:—



Sidelights of ಅ.ಕ.ವಿ.ಪ್ರೇ.ಪ.

(Disappointment in Second Degree)

---

೧. ಶಂಖಾರ್ಣ ದಧ್ಮೌಃ ಪೃಥುಕ್ ಪೃಥುಕ್

ಕಳೆದ ವಾರ್ಷಿಕಾಧಿವೇಶನದಲ್ಲಿ, ಅಕವಿಪ್ರೇಪ ಸದಸ್ಯರು, ಪುಡಿ ಚಿಲ್ರೆಯೊಂದರ ಕತೆಯನ್ನು 'ಮಾಮೂಲಿ' ಎಂದಿದ್ದರಷ್ಟೆ.

ಆದರೆ, ಪುಡಿಚಿಲ್ರೆಗೆ ಅದು ಜೀವನದ ಪರಮ ದುರಂತ.

ಪುಡಿ ಚಿಲ್ರೆ ಕಾಲೇಜಿಗೆ ಹೋಗುತ್ತಿತ್ತೆಂದು ನೀವೆಲ್ಲ ಬಲ್ಲಿರಿ. ಅವನ ಬೀದಿಯಲ್ಲಿ ಆಗ ಅಪ್ಸರೆಯೊಬ್ಬಳಿದ್ದಳು. ಅವಳನ್ನವನು ಮುಗಿಲುಹಳ್ಳಿ ಮಾಲಾಸಿಮ್ಮ್ರಹ ಎಂದು ಕರೆಯುತ್ತಿದ್ದ. ಅವಳೂ ಅವನೂ, ಕಾಲೇಜಿಗೆ ಹೋಗುವ—ಅಲ್ಲಿಂದ ಬರುವ ಸಮಯುಗಳು ಒಂದೇ ಆಗಿದ್ದುವು. ಎಂದ ಮೇಲೆ ಸಾರ್ವಜನಿಕ ದುರಪವಾದ ಗೋಷ್ಠಿ ಸುಮ್ಮನಿದ್ದೀತೆ? ಲೈಲಾ-ಮಜನೂ ಜೋಡಿ ಪ್ರೇಮಪಾಠ ಕಲಿಯಲು ಪುಡಿ ಚಿಲ್ರೆ-ಅಪ್ಸರೆಯರ ಹತ್ತಿರ ಬಂದುದನ್ನು ನೋಡಿದೆವೆಂದು ಸಾ.ದು. ಗೋಷ್ಠಿಯ ಸಾವಿರ·ಸದಸ್ಯರು ಒಕ್ಕೇಶ್ವರನಾಣೆ ಮಾಡಿದರು. ಅವನನ್ನು ಕಂಡು ಮಂದಿ ಗಹಗಹಿಸಿದಾಗ ಪುಡಿ ಚಿಲ್ರೆ ತಾನೂ ಗಹಗಹಿಸಿದ. ಏಕೆಂದರೆ, ಸಾದು ಗೋಷ್ಠಿಯ ಆಪಾದನೆ ಸುಳ್ಳು ಎಂದವನಿಗೆ ಗೊತ್ತು. ಬೀದಿ ಮಾತನ್ನು ನಿಲ್ಲಿಸಲು ಯಾರಿಗೆ ಸಾಧ್ಯ ? ಜಗಳ ಮಾಡುವವನು ಮೂರ್ಖ !

ಕೆಲದಿನಕ್ಕೆ ನಮ್ಮೂರಿನ ರಾಜಕಾರಣಿ ಭಂಗಿ ಬಸಣ್ಣನ ಯತ್ನದಿಂದಾಗಿ ಅಪ್ಸರೆಯ ತಂದೆಗೆ ಬೇರೆ ಊರಿಗೆ ವರ್ಗವಾಯ್ತು. ಅಪ್ಸರೆ ಗುಡಿಚಾಪೆ ಕಟ್ಟಿ ಹೊರಟು ಹೋದಳು. ಪುಡಿಚಿಲ್ರೆ 'ಪದ್ಮ ಪತ್ರ ಮಿವಾಂಭಸಾ' ಎಂಬಂತಿದ್ದ.

ಆದರೆ ಮುಂದೆ ಮೇಘೋದಯವಾಯ್ತು. ಮೋಡ ಕಂಡೊಡನೆ ಚೇರೆ ಬಗೆಯುವುದು ಸಹಜ ತಾನೆ. ಅದರಂತೆ ಪುಡಿಚಿಲ್ರೆಯ ಖಾಲೀ ಮನಸ್ಸಿನ ತುಂಬಾ ಎಲ್ಲಿಂದಲೋ ಏನೋ ವಿರಹತಾಪ ಬಂದು ತುಂಬಿತು. ಅವನ ಜೀವನ ಅಸಹನೀಯವಾಯ್ತು. ಅಪ್ಸರೆ ಅವನ ಹಗಲ್ಗನಸಿನ ರಾಣಿಯಾದಳು. ಪುಡಿಚಿಲ್ರೆ ಭಂಗೀ ಬಸಣ್ಣನೇ ತನ್ನ ಪ್ರೇಮನಾಟಕದ ಖಳನಾಯಕ ಎಂದು ನಿರ್ಧರಿಸಿದ. ಅಪ್ಸರೆಯ ತಂದೆಗೆ ಟ್ರಾನ್ಸ್‌ಫರ್ ಮಾಡಿಸಿದ ನೀಚ ಅವನೇ ಅಲ್ಲವೇ ?

ಇಂತು, ಭಗ್ನಪ್ರೇಮ ರೋಗಪೀಡಿತನಾದ ಪುಡಿಚಿಲ್ರೆ ಮೊನ್ನೆ ದಿನ ವಿಜಯ ಕೆಫೆಯ ಮಹಡಿಯ ಮೇಲೆ ಕುಳಿತು, ಪ್ರೇಮಶ್ರಾದ್ಧದ ಉದ್ದಿನೊಡೆ ತಿಂದು ಕಾಫಿ ಕುಡಿದು, ಸಾಸರಿನಲ್ಲಿ ಕಣ್ಣೀರು ಸುರಿಸುತ್ತಾ ಕುಳಿತಿದ್ದ. ಗಂಟೆ ಸುಮಾರು ಹನ್ನೊಂದಾಗಿರಬಹುದು.

ಇತ್ತ ವಿಜಯ ಕೆಫೆ ರಸ್ತೆಯ ಆಚೆ ಫುಟ್‌ಪಾತಿನ ಮೇಲೆ ಭಂಗಿ ಬಸಣ್ಣ ಹೋಗುತ್ತಿದ್ದ. ಅವನ ಜೊತೆ ಮುನಿಸಿಪಲ್ ಮೆಂಬರ್ ಕೊಟ್ರಬಸಣ್ಣ ಇದ್ದ. ಅಂದು ಪುರಸಭಾಧ್ಯಕ್ಷ ಚುನಾವಣೆ. ಭಂಗಿಬಸಣ್ಣ ಕೊಟ್ರಬಸಣ್ಣನಿಗೆ 'ಸ್ವಜಾತೀಯತೆಯೇ ರಾಷ್ಟ್ರೀಯತೆ ಆದ್ದರಿಂದ ನನಗೇ ಓಟು ಹಾಕು' ಎಂದೆನ್ನುತ್ತಿದ್ದ. ಕೊಟ್ರಬಸ್ಯ ಜಗ್ಗಲಿಲ್ಲ. ಭಂಗಿ ಬಸಣ್ಣ ರಾಮಬಾಣ ಪ್ರಯೋಗಮಾಡಲುದ್ಯುಕ್ತನಾಗಿ ಜೇಬಿನಿಂದ ಹತ್ತು ರೂಪಾಯಿ ನೋಟುಗಳ ಕಟ್ಟೊಂದನ್ನು ತೆಗೆದ.

ಆ ಕ್ಷಣದಲ್ಲಿ ಪುಡಿಚಿಲ್ರೆ ಅಟ್ಟದ ಮೇಲಿಂದ ಬಸಣ್ಣನನ್ನು ನೋಡಿದ. ಕಂಬನಿ ಸುರಿಸುತ್ತಿದ್ದ ಕಣ್ಣಿನಲ್ಲಿ ಕಿಡಿಗಳು ಸಿಡಿದವು. ಸುಪ್ತಮನದ ಗುಪ್ತಕ್ರೋಧ ಬಹಿರಂಗಕ್ಕೆ ಬಂತು. ಸಾಸರನ್ನು ಎತ್ತಿ 'ಇದು ಕೇಳ್ ಅಪ್ಸರಾ ಪ್ರೇಮ ಪ್ರಪಂಚಕ್ಕೆ' ಎಂದು ಅದನ್ನೆಸೆದ. ಸಾಸರ್ ರೊಯ್ಯನೆ ಹಾರಿ ಬಂತು—ಸುದರ್ಶನದಂತೆ.

ರಸ್ತೆಯಲ್ಲಿನ ಜನ 'ಫ್ಲೈಯಿಂಗ್ ಸಾಸರ್' ಎಂದರು. ಕೂಗಿ ತಟ್ಟನೆ ನಿಂತರು. ಪಕ್ಕದ ರಸ್ತೆಯ ಜನ ಕತ್ತೆತ್ತಿ 'ಫ್ಲೈಯಿಂಗ್ ಸಾಸರ್' ಎನ್ನುತ್ತಾ ಓಡಿ ಬಂದರು. ಕಾರುಗಳು ಗಕ್ಕನೆ ನಿಂತವು. ಜಟಕಾ ತಟ್ಟುಗಳು ಹೇಷಾರವ ಮಾಡುತ್ತಾ ತಟಸ್ಥವಾದವು. ಲಾರಿಗಳು ಧಡಬಡಿಸುತ್ತಾ ನುಗ್ಗಿದವು. ಪೋಲೀಸಿನವ ನಿಸ್ಸಹಾಯನಾದ. ಹುಡುಗರು ಚಿಲ್ಲಾನಾ ಉತಾಯಿಸಿದರು. ಸಾಸರು ಹಾರಿಬಂದು ಭಂಗಿ ಬಸಣ್ಣನ ಕತ್ತಿಗೆ ಬಡಿಯಲು ಅವ ಮುಕ್ತಕಂಠದಿಂದ ಒರಲಿ, ಓಡಿ, ಮುಂದಿದ್ದ ಜಟಕಾ ಮೇಲೆ ಬಿದ್ದ. ಅಷ್ಟುಹೊತ್ತಿಗೆ ರೈಲೆಂಜಿನು ಲೆವೆಲ್ ಕ್ರಾಸಿಂಗಿನಲ್ಲಿ ಸೀಟಿ ಹಾಕಿ ನಿಂತಿತು. ಎಲ್ಲೆಲ್ಲೂ ಜನ. 'ಫ್ಲೈಂಗ್ ಸಾಸರ್ ಕೀ ಜೈ' ಎಂದು ಘೋಷಣೆ. ಏನಾಯಿತೋ ಯಾರಿಗೂ ತಿಳಿಯಲಿಲ್ಲ.

ಹೋಟಲ ಅಟ್ಟದ ಮೇಲೆ ಪುಡಿಚಿಲ್ರೆ ಚಪ್ಪಾಳೆ ತಟ್ಟಿ ಕುಣಿದ. ಅಲ್ಲಿದ್ದ ಜನ 'ಲ್ಯೋ! ಯ್ಯೋ! ಏನಾತಲೇ ನಿನ್ಗೆ ಬ್ಯಾನೆ, ಬೆಪ್ಪನ ಮಗನೇ' ಎಂದು ಮಂಗಳಗೀತೆ ಹಾಡಿದರು.

ನಿನ್ನಿನ ಬೆಂಗಳೂರು ಪತ್ರಿಕೆಗಳಲ್ಲಿ,—'ಮುಗಿಲು ಹಳ್ಳಿಯಲ್ಲಿ ನಿನ್ನೆಯ ದಿನ ಬೆಳಿಗ್ಗೆ 11-15 ಘಂಟೆಗೆ ಫ್ಲೈಯಿಂಗ್ ಸಾಸರ್ ಕಂಡು ಬಂತು' ಎಂದು ಮಾತ್ರ ಸುದ್ದಿ ಬಂತು.

೨. ರಷ್ಯ ಉಪಗ್ರಹ — (ಕೃತಕ)

ಈ ದಿನದ ಬೆಂಗಳೂರು ಪತ್ರಿಕೆಗಳಲ್ಲಿ ಈ ರೀತಿ ಸುದ್ದಿ ಬಂದಿದೆ. "ಮುಗಿಲು ಹಳ್ಳಿಯಲ್ಲಿ ಸ್ಪೂಟ್ನಿಕ್ 2. ಕಂಡುಬಂದುದಾಗಿ ಮುಗಿಲು ಹಳ್ಳಿಯ ಸಾವಿರಾರು ಜನ ತಿಳಿಸುತ್ತಾರೆ. ನಿನ್ನೆ ಸಂಜೆ 5-45ಕ್ಕೆ ಅದು ಕಂಡಿತು. ಆರರ ವರೆಗೆ ಗೋಚರ ವಾಗಿದ್ದು ನಂತರ ಪಶ್ಚಿಮ ದಿಕ್ಕಿನಲ್ಲಿ ಮಾಯವಾಯ್ತು".

ನಮ್ಮೂರಿನ ಬಾತ್ಮೀದಾರರ ತೂಫಾನ್ ಎಕ್ಸ್‌ಪ್ರೆಸ್ಸಿಗೆ ನೀವು ಮರುಳಾಗಬೇಡಿ. ತೆರೆ ಮರೆಯ ಸುದ್ದಿ ಇಂತಿದೆ:—ಸ್ವಪ್ನ ಸುಂದರೀ ರಸ್ತೆಯಲ್ಲಿ ದಿವ್ಯ ಸೌಧವೊಂದಿದೆ. ಅಲ್ಲಿರುವವರು ಗಂಧರ್ವರಲ್ಲ. ಅದರಲ್ಲಿ ಎಂಟು ಭಾಗಗಳಿವೆ. ಅಲ್ಲಿ ಎಂಟು ಮಧ್ಯಮ ವರ್ಗದ ಸಂಸಾರಗಳಿವೆ. ಆ ಮನೆಯ ವರಾಂಡಕ್ಕೆ ಅಂಟಿರುವ ಕೋಣೆ ಯಲ್ಲಿ ಒಬ್ಬ ವಿದ್ಯಾರ್ಥಿ ಇದ್ದಾನೆ ಹೆಸರು—ರಾಜಕುಮಾರ, ವಯಸ್ಸು—20, ಕೋಮು—ಬ್ರಾಹ್ಮಣ. ಅಪ್ಪ ಅಡವಾಗಿ ದುಡ್ಡು ಕಳಿಸುತ್ತಾನೆ. ಕಾಲೇಜು ಮೇಷ್ಟರಿಗೆ ಪಾಠ ಹೇಳಿಕೊಡಲು ಬರುವುದಿಲ್ಲ. ರಸ್ತೆಯ ಹೆಸರು ನಿಮಗೇ ಗೊತ್ತು. ಅಂದ ಮೇಲೆ ಆ ಹುಡುಗ ಸುಖವಾಗಿದ್ದ, ಮಜಾಮಾಡುತ್ತಿದ್ದ, ಥೇಂಜು ಥೇಂಜಿಗೂ ಸಿನಿಮಾ ನೋಡುತ್ತಿದ್ದ, ಹಾಳು ಹರಟೆ ಕೊಚ್ಚುತ್ತಿದ್ದ, Happy-go-Lucky ಆಗಿದ್ದ ಎಂದು ಮತ್ತೆ ಹೇಳಬೇಕಾಗಿಲ್ಲ.

ಅದೇ ಸೌಧದ A ಎಂಬ ಸಂಸಾರದ X ಎಂಬ ಹುಡುಗ, B ಸಂಸಾರದ ಹುಡುಗಿಯೊಡನೆ ಪ್ಲೆಟಾನಿಕ್ ರೀತಿಯ ಸಂಬಂಧ ಇಟ್ಟುಕೊಂಡಿದ್ದನೆಂದು ನಾವು ಹೇಳಬೇಕೇ? ಊರೂರಿಗೇ ಗೊತ್ತು. ಹುಡುಗಿಯ ಹೆಸರು-ರಾಣಿ. X ಮತ್ತು ರಾಣಿಯರ ಪ್ರೇಮ ಆದರ್ಶ ಪ್ರೇಮ. ಅವರಿಬ್ಬರೂ ಚೆಲ್ಲು ಬಡಿಯುತ್ತಿದ್ದರು. ಚಕ್ಕಂದ ಆಡುತ್ತಿದ್ದರು. A ಆಗಲೀ B ಆಗಲೀ ಆಕ್ಷೇಪಿಸುತ್ತಿರಲಿಲ್ಲ. ಅವರಿಬ್ಬರ ಕರ್ಮ, ಯಾರೇನು ಮಾಡಲು ಸಾಧ್ಯ, ಇಂದಲ್ಲದಿದ್ದರೆ ನಾಳೆ ಇವರ ಕತ್ತಿಗೆ ಕಣ್ಣಿ ಹಾಕಿಬಿಟ್ಟರಾಯ್ತು ಎಂದುಕೊಂಡು ಸುಮ್ಮನಿದ್ದರು. ರಾಜಕುಮಾರ ನಿಷ್ಪಕ್ಷಪಾತೀ ವೀಕ್ಷಕನಾಗಿದ್ದ. ಪ್ರೇಮ ವಿವಾಹಕ್ಕೆ ತಾತ್ವಿಕ ಬೆಂಬಲವನ್ನು ಅವನು ಎಂದೆಂದೂ ನೀಡುತ್ತಿದ್ದ.

ಹೀಗಿರುವಾಗ ಒಂದು ದಿನ, ರಾಜನ ಮಿತ್ರ ಅಮಾತ್ಯ ರಾಕ್ಷಸ ಅವನ ಕೋಣೆಗೆ ಎಂದಿನಂತೆ ಬಂದು ಹಾಳು ಹರಟೆ ಕೊಚ್ಚಿದ. ಬಳಿಕ ಅಮಾತ್ಯ ರಾಕ್ಷಸ ಹೊರಟವನು ತಟ್ಟನೆ ನಿಂತ.

"ಏನ್ರಾಜಾ ನಿನ್ನ ಫ್ರೆಂಡ್ ಹೇಗಿದಾರೆ" ಎಂದ ಅಮಾತ್ಯ ರಾಕ್ಷಸ.

"ನನ್ನ ಫ್ರೆಂಡ್ ಯಾರೋ?" ಎಂದು ಕೇಳಿದ—ಭಯವಿಸ್ಮಯ ಚಕಿತ ರಾಜ.

"ನನ್ನೇ ಕೇಳ್ತೀಯಾ? ನಡಿಲೋ ನಿನ್ನ ದರ್ಬಾರು" ಎಂದ ಅಮಾತ್ಯ ರಾಕ್ಷಸ. ರಾಜನ ಫ್ರೆಂಡ್ ರಾಣಿಯೇ ಹೊರತು ಇನ್ನಾರೂ ಆಗಲು ಸಾಧ್ಯವಿಲ್ಲ ಎಂದ. ಗ್ರಾಮರಿನಲ್ಲಿ ಹಾಗೇ ಹೇಳಿದಾರೆ, ಮ್ಯಾಸ್ಕ್ಯುಲೈನ್—ರಾಜಾ, ದಿ ಅದರ್ ಜಂಡರ್ ರಾಣಿ ಎಂದು ಸಮರ್ಥನೆ ಕೊಟ್ಟ.

ರಾಜ ತನಗೇನೂ ತಿಳಿಯದು ಎಂದ. ತನ್ನನ್ನು ಮೋಹಿಸುವಷ್ಟು ಹುಚ್ಚಳಿರಲಿಕ್ಕಿಲ್ಲ ರಾಣಿ ಎಂದ. ಪ್ರೇಮದ ಕಾಗುಣಿತವೇನು ಎಂದು ಕೇಳಿದ. ಅಲ್ಲದೆ ರಾಣಿ Xನನ್ನು ಪ್ರೀತಿಸುವಳಲ್ಲಾ ಎಂದ

ಅಮಾತ್ಯ ರಾಕ್ಷಸ ಅಟ್ಟಹಾಸ ಮಾಡಿದ. ಬಾಯ್ಮುಚ್ಚು ಎಂದ ರಾಜು ನಿನ್ನೆ ನೀನಿಲ್ಲದಾಗ ರಾಣಿ ನಿನ್ನ ಕೋಣೆಯ ಕದಕ್ಕೇ ಒರಗಿ ನಿಂತಿದ್ದಳು ಎಂದ ರಾಕ್ಷಸ. 'ಲೇಕೆ ಪೆಹೆಲಾ ಪೆಹೆಲಾ ಪ್ಯಾರ್' ಎಂದು ಗೊಣಗುತ್ತಿದ್ದುದನ್ನು ಕೇಳಿದೆ ಎಂದ ರಾಕ್ಷಸ.

ರಾಜ ರೇಗಿದ. ಕಂಡವರ ಹೆಣ್ಣುಮಕ್ಕಳ ಸುದ್ದಿ ಮಾತನಾಡುವುದು ಲೋಫರುಗಳ ಕೆಲಸ ಎಂದ. ಮಾತು ಅಲ್ಲಿಗೆ ನಿಂತಿತು.

ಇತ್ತ X—ರಾಣಿಯರ ಪ್ರೇಮ ವನದಲ್ಲಿ ಬಿರುಗಾಳಿ ಬೀಸಿತು. X ಬಾಳೆಹಣ್ಣಿನ ಸಿಪ್ಪೆಯ ಮೇಲೆ ಜಾರಿ ಬಿದ್ದು ಕಾಲು ಮುರಿದುಕೊಂಡು ಆಸ್ಪತ್ರೆ ಸೇರಿದ. ರಾಣಿ ತನ್ನ ಪ್ರಿಯತಮನನ್ನು ನೋಡಲು ಹೋದಳು. X ಕಂಬನಿಗರೆದ. ಬಾಳು ಶೂನ್ಯವಾಯ್ತೆಂದ. ಪ್ರೇಮವೊಂದೇ ಆಸರೆ ಎಂದ. ರಾಣಿ ದುಃಖಾರ್ತಳಾದಳು. ಮನೆಗೆ ಬಂದಳು. ಬಂದ ರಾಣಿಯನ್ನು ಅವಳಮ್ಮ ಚೆನ್ನಾಗಿ ತರಾಟೆಗೆ ತೆಗೆದುಕೊಂಡಳು. ಕುಂಟ X ತನ್ನ ಅಳಿಯನಾಗುವುದಕ್ಕೆ ಅವಕಾಶ ಕೊಡುವೆನೆಂದು ರಾಣಿ ಇನ್ನೂ ಇನ್ನೂ ಬಗೆದಿದ್ದರೆ ಅದು ಕೇವಲ ಭ್ರಾಂತಿಯೆಂದು ಹೇಳಿದಳು. ಅಲ್ಲಿಗೇ ಸುಮ್ಮನಾಗದೆ ಆಸ್ಪತ್ರೆಗೆ ಹೋಗಿ Xನ ಮುಂದೆ ಘುಡುಘುಡಿಸಿದಳು. ಆ ಸಂಜೆ Xಗೆ ಜ್ವರ ಬಂತು. ಮರುದಿನ ಎಂದರೆ ನಿನ್ನೆ ಅವ ಹರ ಹರ ಎಂದ—ಡಾಕ್ಟರ ಔಷಧಿಯ ದೆಸೆಯಿಂದಲೋ, ಪ್ರೇಮ ಭಗ್ನವಾದ ಆವೇಗದಲ್ಲೋ ಎಂಬುದರ ಬಗೆಗೆ ಭಿನ್ನಾಭಿಪ್ರಾಯಗಳಿವೆ.

ನಿನ್ನೆ ಮಧ್ಯಾಹ್ನ ಅಮಾತ್ಯರಾಕ್ಷಸ, ರಾಜನ ಕೋಣೆಗೆ ಹೋದ. ರಾಜ ಕೊಲೆಗಡುಕ ಎಂದ. X ಸತ್ತುದೇಕೆ ಎಂದು ಸವಾಲು ಹಾಕಿದ. ನೀನು ಅಂತಹ ಸಾಧುವಾಗಿದ್ದರೆ ರಾಣಿಯ ಹೃದಯವನ್ನೇಕೆ ಕದ್ದೆ ಎಂದು ಪ್ರಶ್ನಿಸಿದ. ನೀನು ಕಳ್ಳ; ನಿನ್ನನ್ನವಳು ಪ್ರೀತಿಸುತ್ತಿದ್ದುದರಿಂದಲೇ ಅವಳು Xನನ್ನು ಮದುವೆಯಾಗಲು ಒಪ್ಪಲಿಲ್ಲ; ಆದುದರಿಂದಲೇ X ನಿರಾಶನಾಗಿ ಅಸು ನೀಗಿ ಅಮರನಾದ ಎಂದು ಡಿಕ್ಲೇರ್ ಸಿದ. ನಿನ್ನ ಮುಖ ನೋಡುವುದಿಲ್ಲ; ಮರೆಸಿ ಕೊರಳನು ಕೊಯ್ವ ನರರ

ಕಳೆ ಮನವೇ ಎಂದ ದಾಸರು ಪೂಜ್ಯರು ಎಂದ. ಎಂದವನೇ ಪ್ರತಿಭಟನೆ ಸೂಚಿಸಲು ಅಮಾತ್ಯರಾಕ್ಷಸ ವಾಕೌಟ್ ಮಾಡಿದ.

ರಾಜ ಸಂತ್ರಸ್ತನಾಗಿ ಕುಳಿತಿದ್ದ. ಸ್ವಲ್ಪ ಹೊತ್ತಿನಲ್ಲೇ ಕೈಲಿ ವ್ಯಾನಿಟಿ ಬ್ಯಾಗ್ ಹಿಡಿದ ಜಾರ್ಜಟ್ಟೆ, ರಾಣಿ, ಅವನ ಕೋಣೆಯ ಮುಂದೆ ನಡೆದಳು. ವ[illegible]ಟಿಬ್ಯಾಗಿನ ಮೇಲೆ ಅವಳ ತಮ್ಮನ ಕೆಂಪು ಬಲೂನ್ ಇತ್ತು. ರಾಣಿ ರೋಷದಿಂದ ಅದನ್ನು ತೆಗೆದೊಗೆದು ಮುಂದಡಿ ಇಟ್ಟಳು.

ಆ ಬಲೂನ್ ರಾಜನ ಕೋಣೆಯೊಳಗೆ ಬಿತ್ತು. ರಾಜ ಅದನ್ನು ನಡುಗುವ ಕೈಗಳಿಂದ ಎತ್ತಿಕೊಂಡು ಕಣ್ಣಿಗೆ ಒತ್ತಿಕೊಂಡ. ಬಳಿಕ ಅದನ್ನು ಹಿಡಿದು ಕೋಣೆ ಯಿಂದ ಹೊರಬಿದ್ದ. ರಾಣಿಯ ಹಿಂದೆಯೇ ಹೋದ. ಅವಳು ಲೋಕಲ್ ಟ್ರೈನ್ ಹತ್ತಿ ದಿಗಂತದ ಕಡೆಗೆ ಸಾಗಿದಳು ಸ್ಥಂಭೀಭೂತನಾಗಿ ರಾಜ ಎತ್ತಲೋ ಹೊರಟ. ಅವನ ಎಚ್ಚರು ತಪ್ಪಿಹೋಗಿತ್ತು. ಹೃದಯ ವೀಣೆ ಕೀಸರ ಬಾಸರಿ ಸುತ್ತಿತ್ತು. ತಿರುಗುತ್ತಾ ತಿರುಗುತ್ತಾ ಅವನು ಮುಗಿಲುಹಳ್ಳಿಯ ಪಶ್ಚಿಮದಲ್ಲಿರುವ ಗುಡ್ಡವನ್ನು ಸಾರಿ ಅದರ ತುದಿಮುಟ್ಟಿ, ವಿಷಾದ ಮೂಕ ಮನನಾಗಿ ಕುಳಿತುಬಿಟ್ಟ. ಹಾಗೆ ಎಷ್ಟುಹೊತ್ತು ಕುಳಿತನೋ ಏನೋ?

ಪ್ರೇಮ ವಿಫಲವಾದರೆ ಅದರಿಂದ ಮನಸ್ಸು ತಳಮಳಿಸಬಹುದು. ಆದರೆ ಗುಡ್ಡಹತ್ತಿ ಬಿಸಿಲಲ್ಲಿ ಕುಳಿತರೆ ಆ ತಳಮಳ ಹೋಗುವುದೇ? ದಂಡು ದಾಳಿ ಬಂದರೆ, ಉಂಡಿರಬೇಕೋ ಉಪವಾಸ ಒಣಗಬೇಕೋ? ರಾಜನಿಗೆ ಬಾಯಾರಿಸಿತು. ಹೊಟ್ಟೆ ಹಸಿಯಿತು. ಊರಿಗೆ ಹೊರಟ ಆದರೆ ಅವನು ಕುಳಿತ ಕಲ್ಲಿನ ಕೆಳಗೆ ಒಂದು ಕಡೆ ಒಂದು ಹಾವು ಮತ್ತೊಂದು ಕಡೆ ಒಂದು ಹುಚ್ಚುನಾಯಿ ಕುಳಿತಿದ್ದವು. ಪ್ರೇಮ. ಭಯದಲ್ಲಿ ಪರ್ಯವಸಾನವಾಯ್ತು. ರಾಜ ಅಲ್ಲಿ ಕುಳಿತಿರಲೇಬೇಕಾಯ್ತು. ಅವನು ಕೈಲಿದ್ದ ಬಲೂನನ್ನು ಊದಿ ಅದರ ಬಾಯಿಗೆ ಕರ್ಚೀಫ್ ಕಟ್ಟಿ ಕೈಲಿ ಹಿಡಿದು ಕುಳಿತುಬಿಟ್ಟ.

ಇತ್ತ 5-40ಕ್ಕೆ ಸರಿಯಾಗಿ ಮುಗಿಲ ಹಳ್ಳಿ ಚೌಕೀಪೇಟೆಯ ಹಮಾಲರು ಪಶ್ಚಿಮ ದಿಕ್ಕಿನಲ್ಲಿ ಚಲಿಸುತ್ತಿರುವ ಕೆಂಪು ವಸ್ತುವೊಂದನ್ನು ಕಂಡರು. 'ರಷ್ಯಾ ಬಾಂಬು ಬಂತೋ ಕಾಳ್ಯಾ' 'ಅಲೇ ಈರ್ಭದ್ರ ರಷ್ಯಾ ಚಂದ್ರನ್ನೋಡೋ' 'ಲೇ ಮಲ್ಲ ಏನ್ಪಸಂದೈತೋ ಅಲಲಲಲ..' ಎಂದು ಕೂಗಿದರು. ರಷ್ಯಾ ಚಂದ್ರನನ್ನು ನೋಡಲು ಊರಿಗೆ ಬೀದಿಯೇ ಒಂದು ನಿಮಿಷದಲ್ಲಿ ರಸ್ತೆಗಿಳಿಯಿತು.

ರಷ್ಯಾ ಚಂದ್ರ ಬಹು ಹತ್ತಿರದಲ್ಲೇ ಕಾಣುತ್ತಿರುವುದರಿಂದ ಅದು ಬೀಳುತ್ತಿರ ಬೇಕು ಎಂಬುದಾಗಿ ಊರಿನ ಮುಂಡೀ ಮಹರಾಜರು ತೀರ್ಮಾನಕ್ಕೆ ಬಂದರು ಅದರಲ್ಲಿ ಆಟಂಬಾಂಬಿದ್ದರೆ? ಎಂಬ ಸಂಶಯ ಬಂತು ಅವರೆಲ್ಲ ಭಯಗ್ರಸ್ತ

ರಾದರು. ಮುಂದೇನು? ಎಂದು ಟೆಲಿಫೋನಿನಲ್ಲಿ ಮಾತಾಡಿಕೊಂಡರು. "ಲೇ ಮಾಧೇವ ಮುಗ್ಲಳ್ಳಿ ಇನ್ನು ತಿಂಥಂಗೇ ಕಣಲೇ. ಅದು ವ್ಯಾಲೇ ಬರ್‍ತ್ತಾ ಐತೋ. ದುಡ್ಡು ಪಡ್ಡು ಏನೇನೈತೋ ತಗಂಡು ಕಾರ್‍ಥ್ತತ್ತಲೇ. ರಷ್ಯಾ ತಂತಪಾ ನಮ್ಗೆ ಕುತ್ತಿಗ್ಗೆ. ನಾನೇನೆ ಹೊಂಟೆ" ಇದೊಂದು ಮಾದರಿ ಟೆಲಿಫೋನ್ ಸಂಭಾಷಣೆ.

ಆ ಕೆಂಪುವಸ್ತು ಪಶ್ಚಿಮದಲ್ಲೇ ಇತ್ತು. ಸೂರ್ಯಾಸ್ತವಾಗುವ ತನಕ ಹೋಗಲೇ ಇಲ್ಲ. ಸೂರ್ಯಾಸ್ತವಾಯ್ತು ಉಪಗ್ರಹ ಮಾಯವಾಯ್ತು. ಕಾಲೇಜಿನ ಮೇಷ್ಟರೊಬ್ಬರು ಆ ಉಪಗ್ರಹವನ್ನೇ ನೋಡುತ್ತಿದ್ದರು ಟೆಲಿಸ್ಕೋಪಿನಲ್ಲಿ. ಅದು ಮಾಯವಾದ ಕೂಡಲೇ ಅವರ ದೃಕ್ಪಥದಲ್ಲಿ ನಾಯಿಯೊಂದು ಗೋಚರವಾಯ್ತು. 'ಲೈಕ' ಮುಗಿಲಹಳ್ಳಿಯ ಬಳಿ ಇಳಿದಿತ್ತು. ಸರಿ ಕಾಳ್ಗಿಚ್ಚಿನಂತೆ ಸುದ್ದಿ ಹಬ್ಬಿತು. ಮುನಿಸಿಪಲ್ ವ್ಯಾನ್ ಗುಡ್ಡಕ್ಕೆ ಹೋಗಿ ಲೈಕವನ್ನು ಹಿಡಿದುಕೊಂಡು ಬಂತು. ಹೊಸ ಪ್ರೆಸಿಡೆಂಟ್ ಭಂಗಿ ಬಸಣ್ಣನವರೂ, ಮಾಜೀ ಅಧ್ಯಕ್ಷ ಸಂಕಣ್ಣನವರೂ ಮುನಿಸಿಪಲ್ ಲಾರಿಯನ್ನು ಅಲಂಕರಿಸಲು ಆಜ್ಞೆ ಮಾಡಿದರು. ಪೆಟ್ರೋಮ್ಯಾಕ್ ದೀಪಗಳ ಸಹಿತ, ಬ್ಯಾಂಡ್ ಬಜಂತ್ರಿಯೊಡನೆ ಮುನಿಸಿಪಲ್ ಮೆಂಬರುಗಳೂ, ಅಧ್ಯಕ್ಷದ್ವಯರೂ, ಲೈಕವೂ ಮೆರವಣಿಗೆ ಹೊರಟವು. ಊರಿಗೆ ಊರೇ ನೆರೆಯಿತು. ಮುಗಿಲುಹಳ್ಳಿಯ ಹೆಮ್ಮೆ ಮುಗಿಲು ಮುಟ್ಟಿತು. ಬ್ಯಾಂಡ್ ಸದ್ದನ್ನು ಮೀರಿಸುವಂತೆ ಲೈಕ ಬೊಗಳುತ್ತಿತ್ತು.

ಮೆರವಣಿಗೆ ವಿಜಯ ಕೆಫೆಯ ಮುಂದೆ ಬಂದಾಗ ರಾಜ ಇಳಿದು ಬಂದ. "ಲೈಕ ಸತ್ತ ಸುದ್ದಿ ರೇಡಿಯೋದಲ್ಲಿ ಪ್ರಸಾರವಾಯ್ತು. ಲಾರಿಯ ನಾಯಿ ಹುಚ್ಚು ನಾಯಿ" ಎಂದು ಕೂಗಿದ. "ಇದು ಲೈಕ ಅಲ್ಲ ನಮ್ಮೂರಿನ ಕಂತ್ರಿ ನಾಯಿ" ಎಂದರಚಿದ.

ಮೆರವಣಿಗೆ ಹಠಾತ್ತನೆ ಚೆದುರಿತು. ಬ್ಯಾಂಡು, ಪೆಟ್ರೋಮ್ಯಾಕ್ಸಿನವರಿಗೆ ಹಣಸಿಕ್ಕುವ ಲಕ್ಷಣವಿಲ್ಲ. ನಿನ್ನೆ ರಾತ್ರಿ ಎಂಟು ಗಂಟೆಗೆ ಆರಂಭವಾದ ನಗೆ ಇನ್ನೂ ನಿಂತಿಲ್ಲ. ಮುಗಿಲುಹಳ್ಳಿ ಹಾಸ್ಯಲಹರಿಯಲ್ಲಿ ತೇಲುತ್ತಿದೆ. ಮುನಿಸಿಪಲ್ ಮೆಂಬರುಗಳೆಲ್ಲ ನಾಪತ್ತೆ. ಅಂದಮೇಲೆ ನೋಡಿ ನಮ್ಮೂರಿನ ಬಾತ್ಮೀದಾರರ ದ್ರೋಹ!

—ಅ. ರಾ. ಸೇ.

ವಿಜ್ಞಾನ ಯಾತ್ರೆ

೧೯೮೩ ನವೆಂಬರ್ ತಿಂಗಳ ಅಂತ್ಯದಲ್ಲಿ ಪ್ರಮೋದಕುಮಾರ ಚಟರ್ಜಿ ಡಿಎಚ್‌ಡಿಆರ್‌ಗೂ ಬಿ ಪ್ಲಸ್‌ಗೂ ವೈಪರೀತ್ಯ ಸಾಮರಸ್ಯವುಂಟು ಎಂಬ ತತ್ವವನ್ನು ಸಿದ್ಧಾಂತೀಕರಿಸಿದನಂತರ, ಚಂದ್ರಲೋಕಯಾನ, ಶನಿಮಂಡಲದವರೆಗೂ ವ್ಯಾಪಿಸಿದ್ದು ವಾಚಕರಿಗೆ ನೆನಪಿರಬಹುದು. ಕ್ಷೀರಪಥದ ನಕ್ಷತ್ರವೊಂದರಲ್ಲಿ ಐಕಿಯಂ ಎಂಬ ಅಣುಲೋಹವೊಂದನ್ನು ನ್ಯೂಜೀಲೆಂಡಿನ ವಿಜ್ಞಾನಿಯೊಬ್ಬ ತನ್ನ ಹಾರಾಟದ ನಡುವೆ ಕಂಡು ಹಿಡಿದದ್ದೂ ಅದೇ ತಿಂಗಳಲ್ಲೇ. ಇದರಿಂದ, ಬ್ರಹ್ಮಾಂಡ ಲೋಹ ಲಿಮಿಟೆಡ್ ಕಂಪನಿಯ ಚಟುವಟಿಕೆಗಳು ಇಮ್ಮಡಿಸಿ, ಭೂ ಗ್ರಹದ ಮೇಲಿಂದ ಎಲ್ಲ ಗ್ರಹ ನಕ್ಷತ್ರಾದಿಗಳಿಗೂ ಸಾಯಿಗಳನ್ನು ರವಾನಿಸುವ ಉದ್ಯೋಗವನ್ನು ಆಯಾ ರಾಷ್ಟ್ರಗಳು ತಮ್ಮ ಸಂಪೂರ್ಣ ಹತೋಟಿಗೆ ತೆಗೆದುಕೊಳ್ಳಬೇಕಾಗಿ ಬಂತು. ಒಂದೇ ಅಣು ಸಂಯೋಜನೆಯ ಎರಡು ಸಂಪುಟೀಕರಣಸ್ಥಿರೋಧಾರವಾದ ಎಕ್ಸನ್ನೂ, ವೈಯನ್ನೂ, ಕಾಸ್ಮಿಕ್ ರಶ್ಮಿಗಳಿಂದ ನೆಯ್ದ ಒಂದು ಚಾಪೆಯಮೇಲೆ ಹಾಸಿದರೆ, ಅವು ಶಬ್ದ ಬ್ರಹ್ಮವನ್ನೇ ಭೇದಿಸಿ ಭೂತ ಸಮನ್ವಯವಾಗುವುದು—ಎಂದು ಡಾ॥ ಕಿಷಿಮೂಷಿ ಯವರು ಬುಧ ಗ್ರಹದ ವಿಶ್ವವಿದ್ಯಾಲಯದ ಘಟಿಕೋತ್ಸವ ಭಾಷಣದಲ್ಲಿ ಪ್ರಕಟಿಸಿದ್ದೂ ಭೌತಶಾಸ್ತ್ರದಲ್ಲಿ ಒಂದು ಗಣನೀಯ ಸಂಭವ ಅಲ್ಲದೆ ಮತ್ತೇನು? ಇದರಿಂದಾಗಿ, ಡಿಸೆಂಬರ್ ಅಂತ್ಯದೊಳಗೆ, ಭೂ ಗ್ರಹದಲ್ಲಿ ಅತೀ ಚಮತ್ಕಾರವಾದ ಒಂದು ಪ್ರಯೋಗ ಈಗ ನಡೆಯಲಿದೆ. ಪೂರ್ವ ರಾಷ್ಟ್ರಗಳಿಗೂ ಪಶ್ಚಿಮ ರಾಷ್ಟ್ರಗಳಿಗೂ ಬೆಳೆದು ಬಂದಿರುವ ದ್ವೇಷ ಅಸೂಯೆಗಳ ಪರಿಹಾರಾರ್ಥ, ಇಡೀ ಭೂಮಿಯನ್ನೇ ಎರಡು ಹೋಳಾಗಿ ಒಡೆದು, ಒಂದೊಂದು ತುಂಡೂ ಕೂಡ, ಈಗಿನ ವೇಗದಲ್ಲೇ ಈಗಿನ ಪಥದಲ್ಲೇ ಒಂದರ ಹಿಂದೊಂದು ಸೂರ್ಯ ಪ್ರದಕ್ಷಿಣೆ ಮಾಡುವಹಾಗೆ ವ್ಯವಸ್ಥೆಗೊಳಿಸಲು ಯೂ ಎನ್ ಓ ಒಪ್ಪಿಗೆಯಂತೆ, ಸಿದ್ಧತೆಗಳಾಗುತ್ತಿವೆ.

— ಡಾ॥ ಪಾಪಣ್ಣ.

ವೈದ್ಯರಲ್ಲಿ ವಿಷನಿಮಿಷಗಳು—

"ಏನು ಡಾಕ್ಟ್ರೇ — ನಿಮ್ಮ ಬಿಲ್ಲು ನೋಡಿ ನನ್ನ ರಕ್ತ ಕುದ್ದು ಹೋಯ್ತು!"

"ಹಾಗಾದರೆ ರಕ್ತ ಶುದ್ಧಿಮಾಡಿದ್ದಕ್ಕೆ ಬೇರೆ ಬಿಲ್ಲು ಮಾಡಬೇಕಾಗುತ್ತೆ."

ಹರಕೆ

ಲಕ್ಷಾಧೀಶನಾಗು ನೀನು!
ಕೋಟ್ಯಾಧೀಶನಾಗು ನೀನು!
ನವಕೋಟಿ ನಾರಾಯಣಾ....
ಎಂದೆಲ್ಲ ಹುಡುಗರನು
ಹಿರಿಯರು ಹರಸುವರು....
ಆದರೆ, ಹುಡುಗರು ಜಾಣರು
ಅದರಿಂ ಅವರಿಗೆ ಖುಷಿ ಇಲ್ಲ....
ಆದಾಯ ತೆರಿಗೆ, ಖರ್ಚಿನ ತೆರಿಗೆ,
ಆಸ್ತಿಯ ತೆರಿಗೆ, ಪಾಸ್ತಿಯ ತೆರಿಗೆ
ಯಾವುದೂ ಇಲ್ಲದ ಲಕ್ಷಾಧೀಶ
ತೆರಿಗೆಯೆ ಕೊಡದ ಕೋಟ್ಯಾಧೀಶ,
ಹೀಗೆಂದು ಹರಸಿರಿ ನಮ್ಮನು ಎಂದು
ಹುಡುಗರು ಹಿರಿಯರ ಕೇಳುವರು.

ಕಾಮತ್.

ಹಾದಿಯಲ್ಲಿ ಕೇಳಿಸಿದುದು—

"ಅಲ್ಲಪ್ಪಾ—ಈ ಕೃತಕ ಚಂದ್ರರಿಗೆ ಗ್ರಹಣ ಹಿಡಿದರೆ—ನಾವೇನೂ ತರ್ಪಣ ಬಿಡಬೇಕಾಗಿಲ್ಲವಲ್ಲಾ?"

(N.G.O.ಗಳ ಮತ್ತೊಂದು ಸಮಸ್ಯೆಯೆ?)

ಹಿಂದೆ ಕೇಳಿದ್ದರೆ ಕ್ಷಮಿಸಿ—

"ಅಮ್ಮಾ ಬೆಂಕಿ ಆರಿದರೆ — ಎಲ್ಲಿ ಹೋಗುತ್ತಮ್ಮ?"

"ನಾ ಹೇಗೆ ಹೇಳ್ಲೀ? ನಿಮ್ಮಣ್ಣ ಮನೆ ಬಿಟ್ರೆ ಎಲ್ಲಿ ಹೋಗ್ತಾರೇಂತ ಹೇಳೋಕೇ ನಂಗೆ ಬರೋಲ್ಲ — ಇನ್ನು ಬೆಂಕಿ ಎಲ್ಲಿ ಹೋಗುತ್ತೇಂದ್ರೆ — ಎಲ್ಲಿ ಹೇಳ್ಲಿ?"

ದಫೆದಾರ್ ದೇರಣ್ಣೋರು

" ಪಾಕೆಟ್ ಮಾರ್ "

ಕಣ್ಣುಕಟ್ಟೆಯ ತುಂಬ ನೀರು ತುಂಬಿತ್ತು. ಫಸ್ಟ್ ಕ್ಲಾಸ್ ಕೋಚ್‌ನ ಪಕ್ಕದಲ್ಲಿನ ಸೆಕೆಂಡ್ ಕ್ಲಾಸ್ ಕಂಪಾರ್ಟ್‌ಮೆಂಟಿನ ಬದಿಗೇ ಅಂಟಿಕೊಂಡ ಥರ್ಡ್ ಕ್ಲಾಸ್ ಡಬ್ಬಿಯಲ್ಲಿ ಕುಳಿತಿದ್ದರು ಶ್ರೀಮತಿ ದಫೇದಾರಿಣಿಯರಾದ ಸೌ|| ಸಾವಂತ್ರಮ್ಮನವರು. ಆ ಡಬ್ಬಿಯ ಹೊರಗೆ ನಿಂತಿದ್ದರು ದ|| ದೇರಣ್ಣನವರು. ಶ್ರೀಮತಿಯವರು ಬಾಗೂರಿಗೆ ಹೊರಟಿದ್ದರು. ಮಗ ಚಿ|| ಬೀರಣ್ಣ ಮೂರು ವರ್ಷದವನಾಗಿದ್ದರೂ ಶ್ರೀಯುತರು ಇನ್ನೂ ದಫೇದಾರಾವಸ್ಥೆಯಲ್ಲಿಯೇ ಇದ್ದರು, ಸಬ್ಬಿನಿಸ್ಪೆಕ್ಟರಾವಸ್ಥೆ ಬರುವ ಸೂಚನೆಯೇ ಕಂಡಿರಲಿಲ "ಇನ್ನು ನೀವು ಸಬ್ಬಿನಿಸ್ಪೆಕ್ಟರಾಗುವವರೆಗೆ ನಾನು ನಿಮ್ಮ ಮನೆ ಮೆಟ್ಟಲು ಹತ್ತುವವಳಲ್ಲ" ಎಂದು ಒಮ್ಮೆಲೇ ಸಿಟ್ಟಿಗೆದ್ದು ಕಾನಿಸ್ಟೇಬಲ ಫಕೀರಸ್ವಾಮಿಗೆ ಹಾಸಿಗೆ ಕಟ್ಟಲು ಆಜ್ಞಾಪಿಸಿ ಹೊರಟಿದ್ದರು.

ಪ್ಲಾಟ್‌ಫಾರಂಮ್ಮಿನಲ್ಲಿ ಜನ ವಿಪರೀತ — ಹಾಗಿದ್ದರೂ ಸೆಕೆಂಡ್ ಕ್ಲಾಸ್ ಕಂಪಾರ್ಟ್‌ಮೆಂಟಿನಲ್ಲಿದ್ದ ಚಟ್ಟೀಕಾರರ ಹುಡುಗಿ ಕಿಟಕಿಯಲ್ಲಿ ತಲೆಹಾಕಿ, ತನ್ನ ಫ್ರೆಂಡನೋ .. ಅಥವ ಗಂಡನೋ ಆಗಬೇಕಾದ ಯುವಕನನ್ನು ನಾಚಿಕೆಯೇ ಇಲ್ಲದೆ ಮುತ್ತಿಕ್ಕುತ್ತಿದ್ದಳು. ದಫೇದಾರರು— ಆ ದೃಶ್ಯವನ್ನು ನೋಡುತ್ತಾ — ಮತ್ತೆ ಸುಂದರ ಸಾವಂತ್ರಮ್ಮನವರನ್ನು ನೋಡುತ್ತಾ, ಮತ್ತೆ ಮತ್ತೆ ಕಣ್ಣಂಚಿನ ನೀರನ್ನು ಒರೆಸಿಬಿಕ್ಕುತ್ತಿದ್ದರು. "ಎಂತಹ ಪುಣ್ಯಶಾಲಿಗಳು ಈ ಚಟ್ಟೀಕಾರರು — ಅದೇ ಪದ್ಧತಿ ನಮ್ಮಲ್ಲೂ ಇರುತ್ತಿದ್ದರೆ ಏಸೊಂದು ಸುಖವಿತ್ತು" ಎಂದು ಮನಸ್ಸಿನಲ್ಲೇ ಮರುಗಿದರು.

"ಬೇಗ ಬಂದುಬಿಡು ಸಾವಂತ್ರಿ"

"............" ನಿರುತ್ತರ.

"ಮಗು ಬೀರೂನ್ನ ಬಿಟ್ಟಿರಲಾರೆ ಸಾವೂ"

—ಎಂದು ಸಾಯುವೆನೆಂಬ ವ್ಯಥೆಯಿಂದ ಹೇಳಿದರು. ಫಳಫಳನೆ ಹೊಳೆಯುವ ವಜ್ರದಂತೆ ಪ್ರಜ್ವಲಿಸುತ್ತಾ ಕುಳಿತಿದ್ದರು ಸೌ|| ಸಾ. ವಜ್ರದಷ್ಟೇ ಕಠಿಣ ಹೃದಯಳು ಈಕೆ ಎಂದು ಕಣ್ಣೀರಿಟ್ಟರು ದ|| ದೇ. ಏನೊಂದು ಚಿಂತೆಯಿಲ್ಲದೆ ಬೈ-ಬೈ ಹೇಳೋಣ

ವೆಂದು ಮನಸ್ಸು ಬಿಗಿಹಿಡಿದರೆ ಈ ಹಾಳು ಚಟ್ಟಿಕಾರರವರ ಕಾಟ ಬೇರೆ. ಕೋಗಿಲೆ ಮಾತಾಡಿತೇನು ? ಅಲ್ಲ.

"ಇವತ್ತು ನೀವು ಸಬ್ಬಿನಿಸ್ಪೆಕ್ಟರಾಗಿ—ಹೀಗೇ ರೈಲಿಂದ ಇಳೀತಿನಿ" ಎಂದರು ಕೋಕಿಲವಾಣಿ ಸೌ॥ ಸಾವಂತ್ರಮ್ಮನವರು.

"ಸಾವಂತ್ರೀ....ನಿನಗೆ ಹ್ಯಾಗೆ ಹೇಳೋದೊ ನನಗೆ ಗೊತ್ತಾಗ್ತಾ ಇಲ್ಲ.... ಮೊನ್ನೆ ಅಸೆಂಬ್ಲಿಲಿ ನನ್ನ ವಿಚಾರ ಬಂದದ್ದು ನಿನಗೆ ಹೇಳ್ಳಿಲ್ವೆ ?....ನನ್ನ ವಿಚಾರ ಸರ್ಕ್ಯಾರದ ಗಮನದಲ್ಲಿದೆ—ಪರ್ಯಾಲೋಚಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗು ವುದು ಎಂದು ಸ್ವಯಂ ಮಂತ್ರಿಗಳೇ ಸ್ವಂತ ಬಾಯಿಂದ ಹೇಳಲಿಲ್ಲವೆ ? ..."

"ಅದು ಆಗಲಿಲ್ಲ—ಹೋಗಲಿಲ್ಲ—ನಮ್ಮ ಬೀರೂ ದಫೆದಾರ್‍ರ ಮಗಾಂತ ಜನ ಅನ್ನೋದು ನನ್ನ ಕಿವಿಗೆ ಸೀಸ ಕಾಸಿ ಹುಯ್ದ ಹಾಗಾಗಿದೆ... ....ಇನ್ನು ನನ್ನಿಂದ ಸಾಧ್ಯವಿಲ್ಲ. ಸಬ್ಬಿನಿಸ್ಪೆಕ್ಟರಾದರೇ ನಿಮ್ಮ ಮುಖ ನೋಡೋದು .. "

—ಎಂದು ಮುಖ ಆ ಕಡೆ ತಿರುಗಿಸಿಬಿಟ್ಟರು. ಇವರೂ ದುಃಖದಿಂದ ಮುಖ ಇನ್ನೊಂದು ಕಡೆ ತಿರುಗಿಸಿದಾಗ ಕಂಡದ್ದು ಆ ಚೊಟ್ಟಿಗಾರ ಹುಡುಗ ಹುಡುಗಿಯರ ಚಕ್ಕಂದದ ದೃಶ್ಯ.

"ಅಯ್ಯೋ ....ಹೋ ಯ್ತು....ಹೋಯ್ತು...."

—ಎಂದು ಗಟ್ಟಿಯಾಗಿ ಬಾಯಿ ಬಡಿದುಕೊಳ್ಳುತ್ತಾ ಬಡಪಾಯಿಯೊಬ್ಬ ದಫೆದಾರರ ಬಳಿಗೆ ಬಂದ.

"ದಫೆದಾರ್‍ರೇ— ಹೋಯ್ತು — ಈಗಿತ್ತು — ಈಗಿಲ್ಲ — ಮಂಗಮಾಯ— ಕಾಪಾಡಬೇಕು ಬಡವ...."

— ಎಂದು ಶಂಖವಾದ್ಯದಲ್ಲಿ ತೊಡಗಿದ. ಗಲಾಟೆ ಎದ್ದಿತು—ಜನ ಮುತ್ತಿದರು ಏನು ಏನು ಎಂದು ದಫೆದಾರರನ್ನೇ ಕೇಳಿದರು.

"ನನ್ನ ಪರ್ಸು — ಹೋಯ್ತು — ಹ್ಯಾಗೆ ಊರು ಸೇರ್‍ಲಿ ನನ್ನ ಪರ್ಸಿಲ್ದೇ — ಅದರಲ್ಲೇ ಟಿಕೆಟ್ ಇತ್ತು—ಪೋಲೀಸ್‌ನೋರೇ ಪರಿಪಾಲನೆ ಮಾಡಬೇಕು."

"ಹೋಗ್ಲಿ ಕೊಡೀಪ್ಪ ಅವರ ಪಾಕೀಟು" ಎಂದು ವೃದ್ಧರೊಬ್ಬರು ದಫೆದಾರರಿಗೆ ಸೂಚಿಸಿದರು.

"ಏನು ಪೋಲೀಸ್ನೋರೋ — ಎದುರಿಗೆ ಕಳ್ಳರಿದ್ರೂ ಹಿಡಿಯೋಕಾಗೋಲ್ಲ" —ಮತ್ತೊಬ್ಬರ ಟೀಕೆ.

“ಅವರುಗಳೇ ಕಳ್ರೊ....” ಎಂದು ಇನ್ನೊಬ್ಬ.

—ಸೌ॥ ಸಾವಂತ್ರಮ್ಮನವರೆದುರು ಈ ರೀತಿಯ ಪೇಚಿನಲ್ಲಿ ಸಿಕ್ಕು ತೊಳಲುವ ಸಂದರ್ಭ ಬಂದೊದಗುವುದೆಂದು ಪಕೋಡದಾಣೆ ಅವರು ಎಣಿಸಿರಲಿಲ್ಲ. ಇವ ಎಲ್ಲಿ ಕಳಕೊಂಡ್ನೊ, ಯಾರು ಕದ್ದರೋ ಇಲ್ಲಿ ಬಂದು ಕಾಡಿಸಿದ್ರಲ್ಲೆ ಹ್ಯಾಗೇ ಎಂದು ಕೋಪವೂ ಬಂತು. ಇವನ ಕೂಗು—ಅಳು—ಇಡೀ ಪ್ಲಾಟ್‌ಫಾರಂನ್ನೇ ಅಲ್ಲೋಲ ಕಲ್ಲೋಲನಮಾಡಿತು. ನಾನಾರೀತಿಯ ಮಾತು ಕಿವಿಯಿಂದ ಕಿವಿಗೆ ಹಾದು ಕಡೆಗೆ—

“ದಫೇದಾರ್ರೇ ಪಾಪ ಆತನ ಪರ್ಸ್ನ ಲಪಟಾಯಿಸಿದರಂತೆ” ಎಂದು ಜನ ಅನ್ನಲು ಪ್ರಾರಂಭಿಸಿದರು. ಜನ ಅಂದಮೇಲೆ ಅವರ ಮುಖಂಡ ಒಬ್ಬ ಖಾದಿ ಟೋಪಿಯವನೇ ಆಗಿರಬೇಕಷ್ಟೆ. ದೊಡ್ಡ ದೊಡ್ಡ ರಾಜಕೀಯ ಜಟಿಲ ಸಮಸ್ಯೆಗಳ ಪರಿಹಾರ ಸಾಧ್ಯವಿಲ್ಲದಿದ್ದರೂ ಇಂತಹ ರೈಲ್ವೆಸ್ಟೇಷನ್ ಗಲಾಟೆಗಳಲ್ಲಿ ಜನಸೇವೆ ಮಾಡುವ ಕಿರು ಪುಡಾರಿಯೊಬ್ಬ ಈ ಪಾಕೆಟ್ ಮಾರ್ ಸಮಸ್ಯೆ ಬಗೆಹರಿಸಲು ಜುಬ್ಬದ ತೋಳು ಮೇಲೇರಿಸಿಕೊಂಡು ಗುಂಪಿನಲ್ಲಿ ನುಗ್ಗಿದ. ಎಲ್ಲರೂ ಸರಿದು ದಾರಿ ಬಿಟ್ಟರು.

ದಫೆದಾರರಿಗೆ ಈ ಒಂದು ವಿಚಾರವೂ ತಲೆಯಲ್ಲಿ ಇಳಿದಿರಲಿಲ್ಲ. ಸಾವಂತ್ರಿ ಊರಿಗೆ ಹೊರಡುವಳಲ್ಲಾ ಎಂದು ತಲೆತಗ್ಗಿಸಿಕೊಂಡು ತನ್ನ ಹೃದಯಾಪಹಾರಿಣಿ ಹಾರಿಹೋದ ದುಃಖದಲ್ಲಿ ಮುಳುಗಿ ನಿಂತಿದ್ದರು.

ಸಾವಂತ್ರಮ್ಮನವರು ಕೂಗಿ ಗದುರಿದರು. “ನೋಡಬಾರದೇಂದ್ರೇ—ಪಾಪ ಆ ಬಡಪಾಯಿ ಅವಸ್ಥೆ....ಹುಡುಕಿಕೊಡಿ.” ಸಾವಂತ್ರಮ್ಮನವರು ಗದುರಿದಮೇಲೇ ದಫೇದಾರರಿಗೆ ಪರಿಸ್ಥಿತಿಯ ಅರಿವಾದದ್ದು. ಅವರ ಸುಂದರ ಬಾಯಿಂದ ಬಂದ ಬೈಗುಳು ಸಂಕ್ರಾಂತಿಯ ಕುಸುರಿ ಸಕ್ರೆಕಾಳಿನಂತಿದ್ದುವು.

“ನೋಡಿ ಆ ಹೆಂಗಸರೂ ಹೇಳ್ತಿದ್ದಾರೆ....” ಎಂದು ಆ ಚಿಲ್ರೆ ಪುಡಾರಿ ಸಾವಂತ್ರಮ್ಮನವರನ್ನು ನೋಡಿ ಹೇಳಿದ. ಅಂತಹ ಚಲುವು ಹೆಂಗಸನ್ನೇ ಕಂಡಿರಲಿಲ್ಲ ಆ ಬಿಳಿ ಟೋಪಿಯವ ಅವನ ಆ ರೀತಿಯ ನೋಟ ಸಾವಂತ್ರಮ್ಮನವರನ್ನು ನಖಶಿಖಾಂತ ಕೋಪದಿಂದ ಕೆರಳುವಂತೆ ಮಾಡಿತು. ಅವರು ಚಪ್ಪಲಿ ಕೈಗೆ ತೆಗೆದುಕೊಂಡು, ಅದರ ಮೊಳೆ ಸರಿಪಡಿಸಿ—ಆ ಪುಡಾರಿಯನ್ನು ನೋಡಿ ಮತ್ತೆ ಕಾಲಿಗೇರಿಸಿದರು. ಆಮೇಲೇ ಆ ಪುಡಾರಿ ಅತ್ತ ತಿರುಗಿಯೂ ನೋಡದೆ ಜನಸೇವೆಯಲ್ಲಿ ತೊಡಗಿದ.

“ಎಲ್ಲ್ರಿ — ಎಲ್ಲ್ರಿ ಯಾರ್ರಿ — ಯಾವಾಗ್ರಿ — ಯಾಕ್ರಿ — ಯಾವತ್ರಿ....” ಎಂದೆಲ್ಲಾ ವಿಚಾರಿಸಿದ. ಈ ಗಲಾಟೆಗೆ ರೈಲು ಕಾಯುತ್ತದೆಯೆ? ಗಾರ್ಡ್ ಸೀಟಿ ಊದಿದ—ಡ್ರೈವರು ಕೂಗಿಸಿದ ಇಂಜಿನ್ನ ಕರೀ-ಹೊಗೆಯನ್ನು ಪ್ಲಾಟ್‌ಫಾರಂ ಮೇಲೆ ತುಂಬಿ ತಾನು ಹೊರಟಿತು.

ಆ ಚಟ್ಟಿಕಾರ ಪ್ರೇಮಿಗಳು ಬಿಡಲಾರದೆ ಬಿಡಬೇಕಾಯಿತು. ಆ ಯುವಕ ತನ್ನ ತುಟಿಯನ್ನು ಅವಳ ತುಟಿಗೇ ತಗುಲಿಸಿ ನೈಯ್ಯನ್ನು ಉಳಿಸಿಕೊಂಡರೆ ಸರಿ ಎಂದೆನ್ನುವಂತೆ ರೈಲಿನೊಡನೇ ಹತ್ತು ಹೆಜ್ಜೆ ಓಡಿದ. ಸಾವಂತ್ರಮ್ಮ—ಮಗ ಬೀರಣ್ಣ ಹೊರಟುಹೋದರು. ರೈಲು ಹೊರಟುಹೋಯಿತು. ಆದರೂ ಪರ್ಸ್ ಕಳೆದುಕೊಂಡ ಕಮಂಗಿ ದಫೇದಾರರನ್ನು ಬಿಡಲಿಲ್ಲ—ಆ ಪುಡಾರಿ ಮತ್ತೆ ಸುತ್ತ ಸೇರಿದ ಮಂದಿ ಎಲ್ಲಾ ಹಾಗೇ ಇದ್ದರು. "ಹಾಳು ಮಂದಿ ಹೆಂಡಿರೊಡನೆ ಮಾತಾಡಿ ರಸಮಯ ಪ್ರೇಮದ ಅಗಲುವಿಕೆಗೂ ಅವಕಾಶ ಕೊಡದೆ ಕಾಡುವರು"— ಎಂದು ದಫೇದಾರರು ಆದ ಅನ್ಯಾಯಕ್ಕೆ ಮರುಗಿದರು. ವಿಧಿ ಇಲ್ಲದೇ ತಮ್ಮ ಸುತ್ತು ಬಿದ್ದ ಬಡಪಾಯಿಯನ್ನ ವಿಚಾರಿಸಿಕೊಳ್ಳಬೇಕಾಯಿತು.

"ನಾವು ಹೇಳ್ತಿರೋದು ಕೇಳಲ್ಲೇನ್ರಿ"—ಪುಡಾರಿ.

"ಈಗಿತ್ತು ಸಾರ್—ನೀವು ಕಂಪಾರ್ಟ್‌ಮೆಂಟಿಗೆ ಬರೋಕೆ ಮುಂಚೆ ಇತ್ತು" ಪಾಕೆಟ್ ಮಾರಿಸಿಕೊಂಡ ಕಮಂಗಿ ಉವಾಚ.

"ನನ್ನೇನು ಮಾಡೀಂತಿರಪ್ಪಾ...."—ದ|| ದೇ.

"ಕೊಟ್ಟುಬಿಡ್ರೀೀ...."—ವೃದ್ಧ.

—ಹಾಗೆಂದಾಗ ದಫೆದಾರು ಚಡ್ಡಿ ಜೇಬಿಗೆ ಕೈಹಾಕಿದರು. ಅವರ ಮುಖದಲ್ಲಿ ತಾವೇ ಕದ್ದ ಕಳೆ ಇತ್ತು. ಸುತ್ತ ಸೇರಿದವರು ಜೇಬಿಂದ ಪರ್ಸೇ ತೆಗೆದುಕೊಡುವ ರೇನೋ ಎಂದು ಕಾತುರದಿಂದ ನೋಡಿದರು. ಹೊರಕ್ಕೆ ಬಂದದ್ದು ಒಂದು ಪೊಟ್ಟಣ. ನಿರ್ಯೋಚನೆಯ ನಿಸ್ಸೀಮ ದಫೆದಾರರು ಪ್ಲಾಟ್‌ಫಾರಂನಲ್ಲಿ ಒಂದೊಂದಾಗಿ ಹಸನ್ ಹಸುವಿನ ತುಪ್ಪದಿಂದ ತಯಾರಾದ ಪಕೋಡವನ್ನು ತಿನ್ನ ತೊಡಗಿದ್ದರು.

ಕಿರುಪುಡಾರಿಗೆ ರೇಗಿತು. ಸ್ವಯಂ ತಾನೇ ಬಂದಿದ್ದರೂ ಈ ಪೋಲೀಸಿನವ ತನ್ನ ಯೋಚನೆಯಲ್ಲೇ ಇರುವನಲ್ಲಾ ಎಂದು ಸ್ವಪ್ರತಿಷ್ಠೆ ತಲೆಹಾಕಿತು.

"ದಫೇದಾರ್ರೀೀ ನನ್ನ ಏನು ಮಾಡೂಂತಿರ ರೈಲೂ ಹೋಯ್ತು—ಪರ್ಸೂ ಹೋಯ್ತು—ಪರ್ಸೂ ಹೋಯ್ತು ಹ್ಯಾಗೇ ಸಾರ್ ಊರು ಸೇರೋದೂ...."

"ಯಾವ ಊರಪ್ಪಾ....ನಿಂದೂ"—ದ|| ದೇ.

"ತಿರುಮಕೊಂಡ್ಲು ನರಸೀಪುರ."

"ಹೋದ ರೈಲಲ್ಲೇ ಹತ್ತಿಹೋಗಿ ಅಲ್ಲಿ ಪೋಲೀಸರಿಗೆ ಹೇಳಿಕೊಂಡಿದ್ದರೆ ಆಗ್ತಿರಲಿಲ್ವೇ"

"ಅಲ್ಲಲ್ಲ ದಫೆದಾರ್ರೇ ಇಲ್ಲಿ ನಾನು ಕಳ್ಕೊಂಡಿದ್ದು."

"ನಾನು ಈ ರೈಲಿಗೆ ಸಂಬಂಧಪಟ್ಟ ಪೋಲೀಸಲ್ರೀ ನಂದು ಹೊಲಸೂರ್ ಗೇಟ್—ನನ್ನ ಹೆಂಡ್ತಿನ್ನ ಊರಿಗೆ ಕಳಿಸೋಕೆ ಬಂದ್ರೆ ನನ್ನೇ ಹಿಡ್ಕೊಂಡುಬಿಡೋದೆ ?"

"ಅಯ್ಯೋ ಪುಸ್ಯ" ಎಂದು ಪುಡಾರಿ ಜಾರಿಕೊಂಡ. ಅವ ಬಂದದ್ದು ಡಬ್ಬಿಯಲ್ಲಿನ ಸಾವಂತ್ರವ್ಮನವರನ್ನು ಕಂಡು—ರೈಲುಹೋಯ್ತು ಅದರೊಡನೆ ಈ ಜನ ನಾಯಕನೂ ಟೋಪಿ ಸರಿಮಾಡಿಕೊಂಡು ಹೊರಡತೊಡಗಿದ—ಆದರೆ ಆ ಪರ್ಸು ಕ್ಕಳಕೊಂಡವ ಬಿಡಬೇಕಲ್ಲ.

"ಸ್ವಾಮಿಾ—ಹೋದ್ಸಲ ನಿಮ್ಮ ಮಾತಿನಮೇಲೇ ನೀವು ಹೇಳಿದವರಿಗೆ ಓಟು ಕೊಡಲಿಲ್ವೇ—ಈಗ ನನ್ನ ಪರ್ಸು ಹುಡುಕಿಸಿ ಕೊಡಿ ಸ್ವಾಮಿಾ ..." ಎಂದು ಅವನ ಜುಬ್ಬ ಜಗ್ಗಿ ಪೀಡಿಸಿದ. ಅವನು ದಫೆದಾರ್ರಿಗೆ ಗಂಟುಬಿದ್ದ.

ದಫೆದಾರ್ರೇ .... ನೀವು ಪೋಲೀಸ್ನೋರು ಪ್ರಜೆಗಳಿಗೆ ಸೇವೆ ಮಾಡೋದು ನಿಮ್ಮ ಕರ್ತವ್ಯ. ಈಗಲೇ ನೀವು—ಈ ಬಡವನ ಗೋಳು ನೋಡಿ ಅವನ ಪರ್ಸು ಹುಡುಕಿಕೊಡಿ—ಹೀಗೆ ನೀವು ಆಸಕ್ತಿ ತೋರಿಸದೆ ನಂಗೆ ಸಂಬಂಧಪಟ್ಟದ್ದಲ್ಲಾಂತ ಕೈಕೊಡವಿಕೊಂಡ್ರೆ ಹ್ಯಾಗ್ರಿ ನೀವು ಸಬ್ಬಿನಿಸ್ಪೆಕ್ಟರಾಗೋದೂ" ಎಂದ. ಸೇವೆ ಮಾಡು .... ಭಡವ ಮಾತು .... ಪರ್ಸು ಹುಡುಕು .... ಸಬ್ಬಿನಿಸ್ಪೆಕ್ಟರು .... ಸಾವಂತ್ರಿ ವಾಪಸ್....ಬೀರಣ್ಣ ಮತ್ತೆ ಮನೆಗೆ. ಎಲ್ಲಾ ಹೊನ್ನಿನ ಮಳೆಗರದಂತಹ ಸಂಗತಿಗಳೇ—ಇವನೂ ಸೇವಾಕರ್ತ—ಜನ ಸೇವಕ ಈತ ಮನಸ್ಸು ಮಾಡಿದರೆ ಖಂಡಿತ ತಾವು ಸಬ್ಬಿನಿಸ್ಪೆಕ್ಟರಾಗಬಹುದೆಂಬ ಹೊಂಗನಸು ಕಂಡರು. ದಫೇದಾರ್ರು ವಿಚಾರಣೆಗೆ ತೊಡಗಿದರು.

"ಎಲ್ರಿ ಕಳ್ಕೊಂಡ್ರಿ ಪರ್ಸು."

"ಪ್ಲಾಟ್‌ಫಾರಂನಿಂದ ಬಂಡಿ ಹತ್ತಾ ಇದ್ದೆ—ನೀವು ಅಲ್ಲೇ ನಿಮ್ಮ ಮನೆಯವರ ಹತ್ರ ಮಾತಾಡ್ತಿದ್ರಿ....ಆ ಚಟ್ಟೀಕಾರ್ರೂ...."

"ಅದು ಸರಿ....ನಿಮಗೆ ಯಾರಮೇಲಾದ್ರು ಅನುಮಾನವಿದೇನ್ರೀ...."

"ಯಾರಮೇಲೇಂತ ಹೇಳ್ಲೀ...." ಎಂದು ತನ್ನ ಹಿಂದೆಯೇ ಡಬ್ಬಿ ಹತ್ತಲು ಹವಣಿಸಿದ ಈ ಖಾದಿಟೋಪಿಯವನನ್ನು ನೋಡಿದ.

"ಪರ್ಸು ಯಾವ ಬಣ್ಣದ್ದು?"—ದ|| ದೇ.

"ಹೊಸಾ ಪರ್ಸು....ಕೃಷ್ಣಾಂಜನದ್ದು."

"ದುಡ್ಡೆಷ್ಟಿತ್ತು?"

"ಸಾವಿರದ್ವೈನೂರು ನಯೆಪೈಸೆ."

"ಅಷ್ಟೊಂದು ಅದರಲ್ಲಿ ಹ್ಯಾಗೆ ಹಿಡಿಸಿತ್ತು?"

"ನಯೆಪೈಸೆ ಎಲ್ಲಾ ನೋಟಿನ ರೂಪದಲ್ಲಿತ್ತು."

"ಅಷ್ಟೇನೋ ಇದ್ದದ್ದು ಅದರಲ್ಲೀ...."

"ತಿರುಮಕೊಂಡ್ಲು ನರಸೀಪುರದ ಟಿಕೆಟ್ಟು—ನನ್ನ ಹೆಂಡ್ತಿ ಕಾಗದ."

"ಬನ್ನೀಂತ ಬರೆದಿದ್ರೆ?".

"ಹೌದು."

"ಮದುವೆಯಾಗಿ ಎಷ್ಟು ದಿನವಾಯ್ತು?"

"ಒಂದೇ ವರ್ಷ."

"ಹೊಸಪರಿ ಹಸಿರು ಪ್ರೇಮ."

"ಹೌದು ಸಾರ್."

"ಹೆಂಡ್ತಿ ಹೆಸರೇನು?"

"ನಾಚಿಕೆಯಾಗುತ್ತೆ ಸಾರ್ ಹೇಳೋಕೆ."

"ನಾಚಿಕೆಪಟ್ಕೋಬಾರದ್ರೀ....ನೋಡಿ ನನ್ನ ಹೆಂಡ್ತಿ ಹೆಸರು ಸಾವಂತ್ರಿ.... ಅವಳು ಬಾಗೂರಿಗೆ ಹೋಗಿದಾಳೇ...."

"ನನ್ನ ಪರ್ಸು ದಫೆದಾರ್‍ರೇ...."

"ಓಹೋ ಅಂಥಾಗೆ ಎಲ್ಲಿಗೋ ಮಾತು ಎಳೆದಿದ್ದೆನಲ್ಲಾ... ನಿಮಗೆ ಇಂಥವರೇ ತೊಗೊಂಡ್ರೂಂತ ಅನ್ನೊ ಅನುಮಾನವಿದೆಯೆ?...... ಹೇಳಿ ಹಿಡಿದುಕೊಟ್ಟುಬಿಡಿ ಅರೆಸ್ಟ್‌ಮಾಡಿ ಆಮೇಲೆ ಕೇಸು ಹಾಕಿ ಮಹಜರ್ ನಡ್ಸಿ ಕೋರ್ಟಿನಲ್ಲಿ ನಿಮ್ಮ ಪರ್ಸು ಕೊಡಿಸ್ತೀನಿ ..."

—ಆ ಬಡಪಾಯಿ ಆಳವಾಗಿ ಆ ಖಾದಿಟೋಪಿಯವನನ್ನು ನೋಡಿದ. ಅವನ ಕೈಯ್ಯನ್ನು ಹಿಡಿದೇಬಿಟ್ಟ. ದಫೇದಾರರು ಒಂದೇಸಲ ಧಿಗ್ಗನೆ ಎದ್ದು ಆ ಜನನಾಯಕನಂತೆ ವೇಷ ಧರಿಸಿದ ಪುಡಾರಿಯನ್ನು ರಟ್ಟೆ ಹಿಡಿದು ಜುಬ್ಬದ ಜೇಬಿಗೆ

ಕೈಹಾಕಿದರು. ಅದೇ ಕೃಷ್ಣಾಜಿನದ ಪರ್ಸು—ಒಳಕ್ಕೆ ತೆಗೆದಾದ ಹದಿನೈದುರೂಪಾಯಿ—ತಿರುಂಕೊಂಡ್ಲು ನರಸೀಪುರದ ಟಿಕೆಟ್ಟು ಒಂದು—ಹೆಣ್ಣು ಬರಹದ ಕಾಗದ!!!

"ನಡಿರಿ ಸ್ಟೇಷನ್‌ಗೆ."

"ನನ್ನ ಪರ್ಸು....ದಫೆದಾರ್ರೆ ಕೊಡಿಸಿಬಿಡಿ."

"ಕೋರ್ಟ್‌ನಲ್ಲಿ ತೊಗೊಳ್ಳಿ."

"ಕೇಸೂ ಕೋರ್ಟೂಂತ ಮುಗಿಯೋ ಹೊತ್ತಿಗೆ ನನ್ನ ಹೆಂಡ್ತಿಗೆ ಋಷಿಪಂಚಮಿ ವಯಸ್ಸು ಬರತ್ತೆ ಮುಂದಿನ ರೈಲಿಗೇ ಹೋಗ್ತೀನಿ ಕೊಡಿಸಿ."

"ಏನಂತೀರ ಸಾರ್"—ದ|| ದೇ.

"ಇದು ಅವನದೇಂತ ಹ್ಯಾಗೆ ಹೇಳ್ತಾನೆ"—ಟೋಪಿವಾಲ.

"ಸಾಕ್ಷಿ ಬೇಕಾದರೆ ತಿರುಮುಕೊಂಡ್ಲು ನರಸೀಪುರದಲ್ಲಿದ್ದಾಳೆ ಆ ಟಿಕೀಟ್ಕೊಡಿ ಕರ್‍ಕೊಂಡು ಬರ್ತೀನಿ...."—ಪಾಪಿ ಪರದೇಶಿ ಆಲಾಪನೆ.

"ದಫೆದಾರ್ರೇ—ನೀವು ಸಬ್ಬಿನಿಸ್ಪೆಕ್ಟರಾಗಬೇಡವೆ ?"

"ಹೌದು"

"ಹಾಗಾದ್ರೆ ಈ ಕೇಸು ಮುಚ್ಚಿಹಾಕಿ—ಗಾರ್ಡಿಗೆ ಹೇಳಿ ಇವನ ತಿರುಮುಕೊಂಡ್ಲಿಗೆ ಸಾಗುಹಾಕಿ—ಮುಂದಿನ ಗಾಡಿಗೆ...."

"ಹಾಗಾದರೇ ನಾನೂ ಸಬ್ಬಿನಿಸ್ಪೆಕ್ಟ್ರು...."

"ಖಂಡಿತ—ನಾನು ಹೇಳ್ತೀನಿ I. G. P. ಗೆ ಅತ ನನ್ನ ಸ್ನೇಹಿತ...."

"ಸಾರ್ ನನ್ನ ಟಿಕೆಟ್ಟಾದರೂ ಕೊಡಿ....ಪರ್ಸು ಬೇಡ .."

"ನೀವೂ ಎಚ್ಚರವಾಗಿರಬೇಕ್ರೀ....ಹೀಗೆ ಯಾವೂರಿದ್ರೆ ಹ್ಯಾಗೆ—ನಿಮ್ಮನ್ನ ಪರೀಕ್ಷೆ ಮಾಡೋಕೆ ಹೀಗೆ ಮಾಡಿದ್ದು—ತೊಗೊಳ್ಳಿ."

—ಎಂದು ಆ ಪುಡಾರಿ ಟಿ. ನರಸೀಪುರದ ಟಿಕೆಟ್ಟು—ಅವನವಳು ಬರೆದ ಪ್ರೇಮಪತ್ರ ಪರ್ಸು ವಾಪಸ್ಸು ಮಾಡಿದ. ಹತ್ತು ರೂಪಾಯಿ ನೋಟು ಖಾದಿ ಜುಬ್ಬ ಸೇರಿತು—ಐದು ರೂಪಾಯಿ ನೋಟು ಕಾಕಿ ಕೋಟು ಜೇಬು ಸೇರಿತು. ಮುಂದಿನ ರೈಲಿಗೆ ಆ ಕಮಂಗಿ ಹೋದ. ಜನನಾಯಕನ ದೆಸೆಯಿಂದ ತಾನು ಸಬ್ಬಿನಿಸ್ಪೆಕ್ಟರಾದೇನು—ಸಾವಂತ್ರಿ ಬಂದಾಳು ಎಂಬ ಹೊಂಗನಸನೊಡನೆ ದಫೆದಾರ್‍ರು ಪಕೋಡಂಗಡಿಕಡೆ ಹೊರಟರು.

—ದಾಶರಥಿ ದೀಕ್ಷಿತ್.

ಕಬ್ಬಿಣದ ಕಡಲೆ

"ತಾಂತ್ರಿಕ" ಪತ್ರಿಕೆ ಸಂಪಾದಕರು ನನಗೆ ಒಂದು ನೌಕರಿ ಕೊಟ್ಟ ಸಮಾಚಾರ ನಿಮಗೆ ತಿಳಿದಿರಬೇಕಲ್ಲಾ....ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದ ಗಣಿತ ಭಾಗದಲ್ಲಿ, ವಾಚಕರು ಕಳುಹಿಸುವ ಲೆಕ್ಕಗಳಿಗೆ ಉತ್ತರ ಹೇಳುವುದೇ ನನ್ನ ಕೆಲಸವಾಗಿತ್ತು. "ಲೆಕ್ಕಗಳೇನೂ ಬರದೆಹೋದರೆ, ಟಪಾಲಿನಲ್ಲಿ ?" ಎಂದೆ, ನಾನು, ಅವರಿಗೆ! ಆಗ, ಲೆಕ್ಕಗಳನ್ನೂ ಅವುಗಳ ಉತ್ತರಗಳನ್ನೂ ನೀವೇ ರಚಿಸಬೇಕಾಗುತ್ತದೆ, ಎಂದರು. "ಅದು ಸುಲಭ....ಹಾಗಾದರೆ, ಸೇರಿಸಿಕೊಳ್ಳಿ ನೌಕರಿಗೆ" ಎಂದೆ, ನಾನು. ವಾರ ವಾರವೂ ನನ್ನದೇ ಲೆಕ್ಕ, ನನ್ನದೇ ಉತ್ತರ....ಹೆಸರು ಮಾತ್ರ ಹತ್ತು ಊರುಗಳಲ್ಲಿನ ನೂರಾರು ತಾಂತ್ರಿಕ ಶಿಕ್ಷಣದ ವಿದ್ಯಾರ್ಥಿಗಳದು ...ಹುಬ್ಬಳ್ಳಿ ಸೋಮಶೇಖರಪ್ಪ, ಗದಗಿನ ಹಣಮಂತರಾಯ, ಮಂಡ್ಯದ ಸಕ್ಕರೆಪ್ಪ....ಇತ್ಯಾದಿ. ಹೀಗೆ, ಆರು ತಿಂಗಳು ನಡೆಯಿತು.

ಆಮೇಲೆ, ಒಬ್ಬ ಒಂದು ಲೆಕ್ಕ ಕಳುಹಿಸಿದ....ಕಬ್ಬಿಣದ ಕಡಲೆ! ಮಗುಚಿದರೂ ಅರ್ಥವಾಗಲಿಲ್ಲ, ಮಗುಚದೆ ಓದಿದರೂ, ಊಹೂಂ.

ಆಗ, ನನಗೊಂದು ಸ್ಫೂರ್ತಿ ಬಂತು ...ಲಂಡನ್ನಿನಲ್ಲಿರುವ ಒಂದು ಎಂಜಿನೀರಿಂಗ್ ಪತ್ರದ 'ಪ್ರಶ್ನೋತ್ತರ' ಭಾಗಕ್ಕೆ ಅದನ್ನು ಕಳುಹಿಸಿಕೊಟ್ಟೆ....ನನ್ನ ತಲೆ ನೋವನ್ನು ಅಲ್ಲಿಯ ಅಂಗ್ರೇಜಿ ವಿದ್ವಾಂಸನಿಗೆ ಬದಲಾಯಿಸಿ ನಾನು ಆರಾಮ ಕುರ್ಚಿಯಲ್ಲಿ ಮಲಗಿದೆ....ಮೂರು ತಿಂಗಳು ಕಾದೆ....ಉತ್ತರ ಬರಲಿಲ್ಲ....ಪತ್ರಿಕೆ ಮಾತ್ರ ಬರುತ್ತಿತ್ತು ಕ್ರಮವಾಗಿ....ಹೋದ ಸಂಚಿಕೆಯಲ್ಲಿ ಅದರ ಸಂಪಾದಕ ಹೀಗೆ ಬರೆದಿದ್ದ........"ಸ್ಥಳ ಸಂಕೋಚದಿಂದ ಹಲವು ಪ್ರಶ್ನೆಗಳಿಗೆ ಉತ್ತರ ಕೊಡಲು ಸಾಧ್ಯವಾಗಲಿಲ್ಲ" ಎಂದು.

ಆರು ತಿಂಗಳಾಯಿತು. ಮೊದಲು "ತಾಂತ್ರಿಕ ಪತ್ರಿಕೆಗೆ ಆ ಹಾಳಾದ ಲೆಕ್ಕಾನ ಕಳುಹಿಸಿಕೊಟ್ಟ ಪರಮ ದ್ರೋಹಿಯ ತಗಾದೆ ಪ್ರಾರಂಭವಾಯಿತು ಮೊನ್ನೆ, ಲಂಡನ್ನಿಂದ ನನ್ನ ಪತ್ರಿಕೆಯ ಕಚೇರಿಗೆ ಒಂದು ಪತ್ರ ಬಂತು....ತೆಗೆದು ನೋಡಿದರೆ, ಅದರಲ್ಲೊಂದು ಲೆಕ್ಕ... ....ಉತ್ತರ ಕೊಡಿರಿ ಅಂತ ಒಂದು ಪತ್ರ ಬೇರೆ........ಓದಿ ನೋಡಿದರೆ, ...ನಾನು ಲಂಡನ್ನಿಗೆ ಕಳುಹಿಸಿದ ಅದೇ ಕಬ್ಬಿಣದ ಕಡಲೆ !........

— ಪಾಟೀಲ.

"ರಿಟ್ ಹಾಕಿ ಸಾರ್"

"ಒಂದು 'ರಿಟ್' ಅರ್ಜಿ ಹಾಕಿಸಾರ್" ಎಂದೆ.

"ಯಾಕಯ್ಯಾ" ಎಂದರು ಲಾಯರು.

"ನಿಮಗೆ ಹೆಸರು ಯಶಸ್ಸು ಬರುತ್ತೆ ಸಾರ್, ನನಗೆ ವ್ಯಾಪಾರ ಕುದುರುತ್ತೆ ಸಾರ್.

"ನನಗೆ ಹೆಸರು ಬೇಡಪ್ಪಾ, ಹಣಬೇಕು, ಎಷ್ಟಿದೆ" ಅಂದರು ಲಾಯರು.

"ಹಣ ಇದ್ದಿದ್ದರೆ ನಿಮ್ಮ ಹತ್ತಿರ ಯಾಕೆ ಸಾರ್ ಬರುತ್ತಿದ್ದೆ, ದೊಡ್ಡ ಲಾಯರ ಹತ್ತಿರ ಹೋಗಿ ಹಣಾನೂ ಸ್ವಾಭಿಮಾನಾನೂ ಕಳೆದುಕೊಳ್ಳುತ್ತಿದ್ದೆ. ಅಷ್ಟು ಗೊತ್ತಾಗಲಿಲ್ವೆ ಸಾರ್, ಅದಕ್ಕೇ ಎಳೇ ಲಾಯರು ಅನ್ನೋದು" ಅಂತ ಹೇಳಿದೆ.

'ರಿಟ್' ಹಾಕ್ತೀನಿ ವಿಷಯ ಏನೂ ಎಂದು ಕೇಳಿದರು, ಲಾಯರು.

ನಂಜನಗೂಡಿನ ಅಮಲ್ದಾರ್ರ ಮೇಲೆ ಅವರ ಜತೆಗೆ ಮೈಸೂರು ಸರ್ಕಾರ ಮತ್ತು ಸರ್ಕಾರದ ಸಚಿವ ಸಂಪುಟ, ಪ್ರಧಾನ ಕಾರ್ಯದರ್ಶಿ ಸಹಿತ, ಇವರೆಲ್ಲರ ಮೇಲೂ ರಿಟ್ ಹಾಕಿ ಸಾರ್ ಎಂದೆ. ಲಾಯರು ತಲೆ ಕೆರೆದುಕೊಂಡರು.

"ನೋಡಿ ಸಾರ್, ನಂಜನಗೂಡು ದೇವಸ್ಥಾನದ ಎದುರಿನಲ್ಲಿ ನಾನು ಕ್ಷೌರದ ಅಂಗಡಿ ಇಟ್ಟುಕೊಂಡಿದ್ದೆ. ಹರಕೆ ಹೊತ್ತೋರೆಲ್ಲಾ ನನ್ನ ಹತ್ತಿರ ಬಂದು ಕಾಣಿಕೆ ಸಲ್ಲಿಸುತ್ತಿದ್ದರು. ಕೆಲವು ದಿನಗಳ ಹಿಂದೆ ಅಮಾವಾಸ್ಯೆ ದಿನ ಒಬ್ಬಾಕೆ ಜಬರ್ದಸ್ತಿನಿಂದ ಬಂದು ತಲೆ ಮಾಡು ಎಂದಳು. 'ಒಂದು ರೂಪಾಯಿ' ಎಂದೆ. 'ನಾನ್ಯಾರು ಗೊತ್ತೋ' ಎಂದಳು. 'ನನಗೆ ರೂಪಾಯಿ ಗೊತ್ತು ಅಷ್ಟೇ' ಎಂದೆ—ರೇಗಿ ಹೊರಟು ಹೋದಳು

ಒಂದೇ ವಾರದಲ್ಲಿ ನನ್ನ ಅಂಗಡಿ ಪಕ್ಕದಲ್ಲೇ ಇನ್ನೊಬ್ಬ ಹಜಾಮನಿಗೆ ಅಂಗಡಿ ಇಟ್ಟುಕೊಳ್ಳಲು ಅಮಲ್ದಾರ್ರು ಆರ್ಡರ್ ಕೊಟ್ಟಿದ್ದರು.

"ನನಗೆ ಹೇಗೆ ಸಾರ್ ಗೊತ್ತಾಗಬೇಕು, ಅವತ್ತು ಬಂದಿದ್ದಾಕೇನೇ ಅಮಲ್ದಾರ್ ಮನೆಗೆ ಮೆಣಸಿನ ಪುಡಿ ಸರಬರಾಜಿಸೋಳು ಅಂತ!

ಈಗ ನನ್ನ ವ್ಯಾಪಾರ ಬಿದ್ದೇ ಹೋಯ್ತು" ಎಂದೆ.

"ಇದಕ್ಕೆ ನಾನು ಹೇಗಯ್ಯಾ ಏತಕ್ಕೇ ಅಂತ ರಿಟ್ ಹಾಕಲಿ?" ಎಂದ ಏನೂ ತಿಳಿಯದ ಹುಡುಗ ಲಾಯರ್.

ಅರಿಯದ ಮಗುವಂತಿದ್ದ ಆ ಲಾಯರನ್ನು ನೋಡಿ ಕನಿಕರಿಸಿ ಹೇಳಿದೆ, "ಅಲ್ಲಾ ಸಾರ್! ಪಕ್ಕದಂಗಡಿ ಶುರುವಾದ ಮೇಲೆ ಹುರಿಗಾಳಿನೋರಿಗೆ, ಮೆಣಸಿನ ಪುಡಿಯೋರಿಗೆ ಮುಫತ್ತು ಸೇವೆ ಎಂದು ತಿಳಿದಮೇಲೆ, ಹರಕೆ ಹೊತ್ತವರು ಹಾಗಿರಲಿ ಸಾರ್, ದೇಶ ದೇಶದವರೆಲ್ಲಾ, ಹಜಾಮತ್ತಿಗೆ ಅಲ್ಲಿಗೆ ಬರುತ್ತಿದ್ದಾರೆ. ಪಕ್ಕದ ರಾಷ್ಟ್ರದವರೂ ಕೂಡ, ಮುಖಬಿಟ್ಟು ತಲೆವಾಡು ಅಂತ ಬರುತ್ತಿದ್ದಾರೆ, ಸಾರ್! ದೇವಸ್ಥಾನದ ಸುತ್ತ ದೊಂಬಿಯೋ ದೊಂಬಿ ಊರಿನ ಶಾಂತಿಗೆ ಭಂಗ ಬಂದಿದೆ ಸಾರ್, ಇನ್ನೆರಡು ದಿನಗಳಲ್ಲಿ ದೇಶದಲ್ಲೇ ಶಾಂತಿಯು ಭಂಗವಾಗುತ್ತದೆ ಸಾರ್.

"ಇದಕ್ಕೆಲ್ಲಾ ಕಾರಣ ಸರಕಾರದ ಪರವಾಗಿ ಅಮಲ್ದಾರ್ರು ಲೈಸೆನ್ಸ್ ಕೊಟ್ಟದ್ದು. ಸಾರ್. ಒಂದು ರಿಟ್ ಹಾಕಿ ಸಾರ್, ನನ್ನ ನೆರೆ ಹಜಾಮನ ಅಂಗಡಿ ಲೈಸೆನ್ಸ್ ರದ್ದುಮಾಡಬೇಕು ಅಂತ" ಹೇಳಿದೆ.

* * *

ಲಾಯರು ರಿಟ್ ಹಾಕಿದರು. ನಾನೇ ಹಿಂದೆ ನಿಂತು ಕೇಸು ನಡೆಸಲು ಸಕಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದೆ. ನಾಲ್ಕನೇ ತಾರೀಖಿಗೆ ವಿಚಾರಣೆ ಗೊತ್ತು ಮಾಡಲ್ಪಟ್ಟಿತ್ತು. ಈ ವಿಷಯ ಒಂದು ಪತ್ರಿಕೆಯಲ್ಲಿ ಪ್ರಕಟಣೆಯೂ ಆಗಿತ್ತು.

ಒಂದನೇ ತಾರೀಖು ನಂಜನಗೂಡಿನಿಂದ ನನ್ನಾಕೆ ಬರೆದ ಕಾಗದ ಓದಿದಾಗ ತಿಳಿಯಿತು ನೆರೆ ಅಂಗಡಿ ಹಜಾಮು ಅಂಗಡಿ ಮುಚ್ಚಿಕೊಂಡು ಓಡಿಹೋಗಿದ್ದ ಅಂತ, ನಾನು ತಕ್ಷಣ ಬರಬೇಕೂಂತ.

ನಾನು ಲಾಯರನ್ನೂ ಕೇಸನ್ನೂ ಮರೆತು ನಗುತ ನಂಜನಗೂಡಿಗೆ ಆ ಸಂಜೆ ತಲುಪಿದೆ. ಬೆಳಗ್ಗೆ ನನ್ನ ಅಂಗಡಿ ತೆಗೆದು ಕುಳಿತೆ. ಅಂದಿನ ನನ್ನ ಸಂಪಾದನೆ ನೋಡಿ, ಆಗಮಿಾಕರು ಬಂದು ವಹವ್ವಾ ಎಂದು ಹೋದರು.

ಮನೆಗೆ ಹೋಗಿ ಅಷ್ಟು ಹಣವನ್ನ ಆಕೆ ಕೈಲಿಕೊಟ್ಟು, ನೋಡೇ ಒಂದು ರಿಟ್ ಹಾಕಿದ್ದಕ್ಕೆ ಅಮಲ್ದಾರ್ರು ಹೆದರಿ, ಅವನ ಲೈಸೆನ್ಸ್ ವಜಾ ಮಾಡಿದರು ಎಂದೆ.

"ನಿಮ್ಮ ತಲೆ! ಆ ನೆರೆಯಂಗಡಿಯವ ಹುರೀಟ್ಟಿಸಾಕೆಯ ಕೂಡ ಗೋವಾಕ್ಕೆ ಓಡಿಹೋದ. ಆಕೆಯ ಹತ್ತಿರ ಹತ್ತುಸಾವಿರ ಇತ್ತಂತೆ" ಎಂದಳು ನನ್ನಾಕೆ.

—ನಂ. ಹ.



ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)

ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್ ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ.

★ ★


ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರಟರಿ ಲಿಮಿಟೆಡ್,

ಮಲ್ಲೇಶ್ವರಂ - - - ಬೆಂಗಳೂರು 3.




ಲೋಹಕ್ಕೆ ರಕ್ಷಣೆಯು ಅವಶ್ಯಕ




ಲೋಹದ ಮೇಲ್ಮೈಯ ಪರಿಸ್ಥಿತಿ ಹ್ಯಾಗೂ ಇರಲಿ, ಅದಕ್ಕೆ ಬಹುಕಾಲ ಪರ್ಯಂತ ತುಕ್ಕು ಹಿಡಿಯದಂತೆ ಕಾಪಾಡುವ ತಕ್ಕುದಾದ **ಶಾಲಿಮಾರ್ ಪೆಯಿಂಟು ಇದೆ.**




..ಇದಕ್ಕೆ ಕಾರಣ, **ಶಾಲಿಮಾರ್ ಪೆಯಿಂಟ್** ಗಳಿಗೆ ಭಾರತದಲ್ಲಿ 55 ವರ್ಷಗಳಿಗಿಂತ ಮಿಗಿಲಾಗಿ ತಯಾರಿಕೆಯ ಅನುಭವದ ಬೆಂಬಲವಿದೆ. ಭಾರತದ ಕಠಿಣ ಮತ್ತು ತೀಕ್ಷ್ಣವಾದ ಹವಾಗುಣವನ್ನೂ ಇವುಗಳು ಎದುರಿಸಬಲ್ಲುವು ಎಂಬುದಕ್ಕೆ ಗ್ಯಾರಂಟಿ ಇವುಗಳ ತಯಾರಿಸುವಿಕೆಯಲ್ಲಿ ನಡೆಸಿದ ಬಹಳ ಸಂಶೋಧನೆ, ಕ್ರಮವಾದ ಸುಧಾರಣೆ ಮತ್ತು ಪ್ರಗತಿಯಾಗಿರುತ್ತದೆ.





ಯಾವದೇ ಪೆಯಿಂಟಿನ ಅವಶ್ಯಕತೆ ಇರಲಿ, ಯಾವ ಕೆಲಸಕ್ಕೆಂದು ಸ್ಪಷ್ಟವಾಗಿ ಹೇಳಿರಿ.

ಶಾಲಿಮಾರ್ ಪೆಯಿಂಟ್ ಪ್ರಾಡಕ್ಟ್‌ಗಳು



ಎಲ್ಲಾ ತರದ ನಮ್ಮ ತಯಾರಿಕೆಗಳ ವಿವರಗಳನ್ನು ಕೊಡುವ ಶಾಲಿಮಾರ್ ರೆಡಿ ರೆಫರೆನ್ಸ್ ನೋಟಬುಕ್ಕಿಗೆ ಪೋ. ಡಾ. 68, ಕಲ್ಕತ್ತ-1 ಕ್ಕೆ ಬರೆದುಕೊಳ್ಳಿರಿ.

SPW 358

SHALIMAR PAINT, COLOUR & VARNISH CO. PRIVATE LTD.

Printed by B. S. Iyengar, Bangalore City.
Publisher—B. N. Gupta. Editor—M. Sivaram.